ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ
Chilume Circulated in and around 10 countries

ಸಂಪುಟ ೪, ಸಂಚಿಕೆ ೧೦, ಮಾರ್ಚ್ ೨೦೧೭

ಚೆಗುರಿರೆ ಕನ್ನಡವೆಮ್ಮೆಯ ಮನದಲಿ ವಸಂತೋತ್ಸವವದುವೇ ಹೃದಯದಿ

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಸಿಡ್ನಿ ಸುದ್ದಿ ... ಪು. ೨

ಚಿಲುಮೆಯ ಒಳಗೆ

ಮಂಕುತಿಮ್ಮನ ಕಗ್ಗ ... ಪು. ೫

ರಾಂ ರಾಮ ... ಪು. ೬

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೯

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೦

ಚಿಲುಮೆಯ ಒಳಗೆ

ಪದಪುಂಜ/ರಂಗೋಲಿ ... ಪು. ೧೧

ಚಿಲುಮೆಯ ಒಳಗೆ

ನೀವು ಮಾಡಿ ... ಪು. ೧೬

ಬ್ಯಾಂಗ್ಕಾಕ್ ಪ್ರವಾಸ – ಭಾಗ ೨ - ಪುಟ ೧೨

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಭಾಷೆಯ ಪ್ರೌಢತೆಯನ್ನು ಜಗತ್ತಿಗೆ ಪರಿಚಯಿಸಲು, ಆ ಭಾಷೆಯಲ್ಲಿ ರಚಿಸಿದ ಕೃತಿಗಳಿಂದ ಸಾಧ್ಯ. ಕನ್ನಡದ ಕವಿರಾಜಮಾರ್ಗದಲ್ಲಿ ಸಿಗುವ ಭಾಷಾ ಬಳಕೆಯ ಚೌಕಟ್ಟಿನ ಮಾರ್ಗಸೂಚಿಗಳು ಇದಕ್ಕೆ ಒಂದು ಉತ್ತಮ ಉದಾಹರಣೆ.

ಸದಾ ಚಲನೆಯುಳ್ಳದ್ದು ಎಂದು ಅರ್ಥೈಸಲು, ಭಾಷೆಯನ್ನು ನದಿಗೆ ಹೋಲಿಸುತ್ತಾರೆ. ಹೇಗೆ ನದಿಯು ನಿಂತ ನೀರಲ್ಲವೋ, ಹಾಗೆಯೇ ಭಾಷೆಯೂ ಸದಾ ಹರಿಯುತ್ತಿರಬೇಕು. ಆಗ ಮಾತ್ರ ಅದೊಂದು ಜೀವಂತ ನದಿ. ಈ ಭಾಷಾ ನದಿಯನ್ನು ಜೀವಂತವಾಗಿಡಬೇಕಾದರೆ, ಭಾಷೆಯನ್ನು ಉಪಯೋಗಿಸುವುದರ ಜೊತಗೆ ಭಾಷೆಗೆ ನಮ್ಮಿಂದ ಕೊಡುಗೆಯೂ ನೀಡಬೇಕು. ಹೊಸ ಕೃತಿಗಳ ರಚನೆಯು ಆ ಕೊಡುಗೆಯಾಗಬಹುದು. ಹಿಂದಿನ ಅನೇಕ ಕೃತಿಗಳನ್ನೇ ಇನ್ನೂ ಜೀರ್ಣಿಸಿಕೊಂಡಿಲ್ಲ, ಈಗೇಕೆ ಹೊಸ ಕೃತಿಗಳ ಮಾತು, ಎಂಬ ಪ್ರಶ್ನೆ ಉದ್ಭವಿಸಬಹುದು. ಒಮ್ಮೆ ಯೋಚಿಸಿ ನೋಡಿ. ಕಾಲವು ಅದರ ಕೆಲಸವನ್ನು ಮಾಡಿಕೊಂಡು ಹೋಗುತ್ತದೆ. ಅರ್ಥಾತ್, ಅದು ಯಾರಿಗೂ ಕಾಯುವುದಿಲ್ಲ. ಆಯಾ ಕಾಲದಲ್ಲಿ ನಡೆಯುವ ವಿದ್ಯಮಾನಗಳನ್ನು ಕೃತಿಗಳಲ್ಲಿ ಸೇರಿಸದಿದ್ದರೆ, ಮುಂದಿನ ಪೀಳಿಗೆಗೆ, ಆ ಕಾಲಮಾನದ ಒಂದು ದೃಶ್ಯವೇ ಅರ್ಥ ಮಾಡಿಕೊಳ್ಳಲು ಆಗುವುದಿಲ್ಲ. ನಾವು ಎಷ್ಟೇ ಇತಿಹಾಸ, ಇತ್ಯಾದಿಗಳನ್ನು ಓದಿಕೊಂಡಿದ್ದರೂ ಬರದ ಚಿತ್ರಣವು, ತ. ರಾ. ಸು ಅವರ ಕಾದಂಬರಿಗಳನ್ನು ಓದಿದಾಗ ಚಿತ್ರದುರ್ಗದ ಆ ಕಾಲದ ಚಿತ್ರಣವು ನಮ್ಮ ಕಣ್ಣ ಮುಂದೆ ಬಂದು ಬಿಡುತ್ತದೆ. ಭಾಷೆಯ ಸೊಗಡನ್ನು ಬಳಸಿ, ಅ ಕಾದಂಬರಿಗಳು ಅಂದಿನ ಜನಜೀವನವನ್ನು ದೃಶ್ಯಕಟ್ಟಿ ರಚಿಸದೇ ಹೋಗಿದ್ದರೆ, ಚಿತ್ರದುರ್ಗದ ಇತಿಹಾಸವನ್ನು ಕೇವಲ ಪಾಠ ಪ್ರವಚನಗಳ ಮೂಲಕ ತಿಳಿದುಕೊಳ್ಳಬೇಕಾದ ಅನಿವಾರ್ಯತೆ ಇರುತ್ತಿತ್ತು.

ಇದು, ಎಲ್ಲರೂ ಕಾದಂಬರಿಗಳನ್ನು ರಚಿಸಲು ಶುರುಮಾಡಿಬಿಡಿ ಎನ್ನುವ ಆಗ್ರಹವಲ್ಲ. ಬದಲಾಗಿ, ನಿಮ್ಮ ಇಷ್ಟಾನುಸಾರ, ನಿಮಗೆ ಯಾವುದರಲ್ಲಿ ಆಸಕ್ತಿ ಇದೆಯೋ ಆ ಪ್ರಕಾರಗಳಲ್ಲಿ ನಿಮ್ಮ ಕಾಲಮಾನದ ಚಿತ್ರಣವನ್ನು ಸೇರಿಸಿ. ನೀವು ಬರೆಯುವ ಕಥೆಯಿರಬಹುದು, ಕವಿತೆಯಿರಬಹುದು, ಹಾಸ್ಯ ಚಟಾಕಿ ಇರಬಹುದು, ಅದರಲ್ಲಿ ನಿಮ್ಮ ಸುತ್ತಮುತ್ತ ನಡೆಯುವುದನ್ನು ಬಣ್ಣನೆ ಮಾಡಿ. ಯಾರಿಗೆ ಗೊತ್ತು, ನೀವು ಬರೆದ ಕೃತಿಯು ಮುಂದಿನ ಪೀಳಿಗೆಗೆ, ಈ ಕಾಲದ ಚಿತ್ರಣವನ್ನು ಮಾಡಿಕೊಡುವ ದೀಪವಾಗಬಹುದು.

ಹೇಗೆ ಹೊಸ ಚಿಗುರು ಮತ್ತು ಹಳೆಬೇರು ಒಂದು ಮರಕ್ಕೆ ಅವಶ್ಯವೋ, ಹಾಗೆಯೇ ಭಾಷೆಗೂ ಕೂಡ ಹೊಸ ಹೊಸ ಚಿಗುರಿನ ಅಗತ್ಯವಿದೆ. ಕನ್ನಡದ ಬೇರುಗಳು ಸಾಕಷ್ಟು ಆಳಕ್ಕಿಳಿದಿವೆ, ಆ ಗಟ್ಟಿ ಬೇರುಗಳ ಮೂಲಕ ಕನ್ನಡದ ಸತ್ವವನ್ನು ಹೀರಿಕೊಂಡು ಹೊಸ ಹೊಸ ಚಿಗುರುಗಳು ಮೂಡುತ್ತಲೇ ಇರಬೇಕು. ಆಗಷ್ಟೇ ಕನ್ನಡದ ನಿತ್ಯ ವಸಂತೋತ್ಸವವು.

ನಿಮ್ಮ ಮನದಲ್ಲಿ ಕನ್ನಡದ ಹೊಸ ಚಿಗುರುಗಳು ಮೂಡಲಿ ಎಂಬ ಹಾರೈಕೆಗಳೊಡನೆ ಯುಗಾದಿಯ ಶುಭಾಶಯಗಳು, ಕನ್ನಡಬನವನ್ನು ನಿತ್ಯಹರಿದ್ವರ್ಣಮಯವಾಗಿಸುವತ್ತ ನಮ್ಮ ಪ್ರಯತ್ನವಿರಲಿ. ▪

ಎರಡು ತಿಂಗಳ ಪ್ರಮುಖ ದಿನಗಳು

ಮಾರ್ಚ್ ಶ್ರೀ ದುರ್ಮುಖಿ/ಹೇವಿಳಂಬಿ ನಾಮ ಸಂವತ್ಸರ, ಉತ್ತರಾಯಣ/ದಕ್ಷಿಣಾಯನ, ಶಿಶಿರ/ವಸಂತ ಋತು, ಫಾಲ್ಗುಣ/ಚೈತ್ರ ಮಾಸ

04 ಶ - ರಾಷ್ಟ್ರೀಯ ಭದ್ರತಾ ದಿನ
08 ಬು - ಮಹಿಳಾ ದಿನ/ಅಮಲಕೀ ಏಕಾದಶಿ
12 ಭಾ - ಹೋಳಿ ಹುಣ್ಣಿಮೆ
16 ಗು - ಸಂಕಷ್ಟ ಚತುರ್ಥಿ
24 ಶು - ಪಾಪ ಮೋಚಿನಿ ಏಕಾದಶಿ
27/28 - ಅಮಾವಾಸ್ಯೆ
29 ಬು - ಚಾಂದ್ರಮಾನ ಯುಗಾದಿ

ಎಪ್ರಿಲ್ ಶ್ರೀ ಹೇವಿಳಂಬಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ/ವೈಶಾಖ ಮಾಸ

05 ಬು - ಶ್ರೀ ರಾಮ ನವಮಿ
09 ಭಾ - ಮಹಾವೀರ ಜಯಂತಿ
10/11 - ಹುಣ್ಣಿಮೆ,
14 ಶು - ಗುಡ್ ಫ್ರೈಡೆ / ಸಂಕಷ್ಟ ಚತುರ್ಥಿ
15 ಶ - ಹೋಲಿ ಸಾಟರ್ಡೇ, 16 ಭಾ - ಈಸ್ಟರ್ ಸಂಡೇ
22 ಶ - ಏಕಾದಶಿ, 26 ಬು - ಅಮಾವಾಸ್ಯೆ
27 ಗು - ವೈಶಾಖ ಮಾಸ ಆರಂಭ
29 ಶ - ಅಕ್ಷಯ ತದಿಗೆ/ಬವವ ಜಯಂತಿ
30 ಭಾ - ಶ್ರೀ ಶಂಕರಾಚಾರ್ಯ ಜಯಂತಿ

ಪುರಂದರ ದಾಸರ ಆರಾಧನೆ

ಅಶ್ವಿನ್ ಲಕ್ಷ್ಮಣ್

"ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ, ಪದುಮನಾಭನ ಪಾದ ಭಜನೆ ಸುಖವಯ್ಯಾ ", ಪುರಂದರ ದಾಸರ ಈ ಪದ ಬಹುಶ: ನಮ್ಮ ಸಿಡ್ನಿ ನಗರದಲ್ಲಿ ಫೆಬ್ರವರಿ ೧೨ ರಂದು ಎರ್ಮಿಂಗ್ಟನ್ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಪುರಂದರ ದಾಸರ ಆರಾಧನೆಗೆ ಸೂಕ್ತ ವರ್ಣನೆ ಆಗಬಹುದು.

೧೫ನೇ ಹಾಗು ೧೬ನೇ ಶತಮಾನದಲ್ಲಿ ದಾಸ ಸಾಹಿತ್ಯ ಹಾಗು ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಅಮೂಲ್ಯ ಕೊಡುಗೆಯಿತ್ತ ಪುರಂದರ ದಾಸರು "ಕರ್ನಾಟಕ ಸಂಗೀತ ಪಿತಾಮಹ" ಎಂದೇ ಖ್ಯಾತಿ ಪಡೆದವರು -- ಈ ೨೧ನೇ ಶತಮಾನದಲ್ಲಿ ಯಾವುದೋ ಬೇರೆ ದೇಶ ಬೇರೆಯೇ ಖಂಡದಲ್ಲಿ ಇರುವ ನಮಗೆ ಇವರ ಕೊಡುಗೆಯ ಮಹತ್ವವನ್ನು ಸುಂದರ ರೀತಿಯಲ್ಲಿ ಆಯೋಜಿಸಿದ "ಪುರಂದರ ಕಮಿಟಿ" ಅವರಿಗೆ ಎಲ್ಲರ ಕೃತಜ್ಞತೆ ಸಲ್ಲಬೇಕಾಗಿದೆ.

ಪಿಳ್ಳಾರಿ ಗೀತೆಗಳೊಂದಿಗೆ ಶುರುವಾದ ಕಾರ್ಯಕ್ರಮವು - ಎರಡು ಗುಂಪುಗಳು ಕೊಳಲು ಹಾಗು ಮೃದಂಗ ವಾದ್ಯಗಳೊಂದಿಗೆ ಇಂಪಾಗಿ ಮೂಡಿ ಬಂದಿತು. ಶಾಸ್ತ್ರೀಯ ಸಂಗೀತ ಕಲಿಕೆಗೆ ಇದು ಯಾಕೆ ನಾಂದಿಯಾಯಿತು, ಹೇಗೆ ಮಾಯಾಮಾಳವಗೌಳದ ಜನ್ಯ ರಾಗಗಳು ಸುಲಭವಾಗಿ ಗ್ರಹಿಸಲ್ಪಡುತ್ತದೆ ಎಂಬ ವಿವರಣೆ ಕೊಟ್ಟರು ಡಾ|| ಶ್ರೀ ಗಿರಿಧರ್, ಲಕ್ಷ್ಮೀ ಕುಮಾರಗುರುಪನ್ ಹಾಗು ದೀಪ್ತಿ ಜಿತೇಂದ್ರ.

ನವರತ್ನಮಾಲಿಕಾ

ರಾಮನ ಗುಣಲೀಲೆಗಳನ್ನು ವರ್ಣಿಸುವ "ಜಯ ಜಾನಕಿ ಕಾಂತ " ನಾಟ ರಾಗದಿಂದ ಶುರುವಾಗಿ, ಮುಂದೆ ಕೃಷ್ಣನ ಕಾಳಿಂಗ ಮರ್ದನ ಮೇಲಿನ "ಆಡಿದನೋ ರಂಗ" ಆರಭಿಯಲ್ಲಿ, ಕೇಳುಗರ ಮನದಲ್ಲಿ "ರಾಮಕೃಷ್ಣರು ಮನೆಗೆ ಬಂದರು ಬಾಗಿಲ ತೆಗೆಯಿರೋ, ಕಾಮಧೇನು ಬಂದಂತಾಯಿತು ವರವ ಬೇಡಿರೋ" ಅನ್ನಿಸಿರಬೇಕು.

ಇವರಿಬ್ಬರ ಅವತಾರ ಗುಣಗಳು ನಮಗೆ ಹೇಗೆ ಸಹಾಯವಾಗುತ್ತದೆ ಅಂತ ಪ್ರಶ್ನೆ ಬಂದಾಗ ದಾಸರು ಹೇಳುತ್ತಾರೆ, "ಕಲ್ಲು ಸಕ್ಕರೆ ಕೊಳ್ಳಿರೋ". ಕೊಳ್ಳಲಿಕ್ಕಾಗದ ವಸ್ತುವನ್ನು - ಅಂದರೆ ವಿಠ್ಠಲನ ನಾಮಸ್ಮರಣೆ ಮಾಡಿ ಲಾಭಗಳಿಸಿ ಎನ್ನುವ ಈ ಹಾಡು ಸೊಗಸಾಗಿ "ಕಲ್ಯಾಣಿ" ರಾಗದಲ್ಲಿ ಮೂಡಿ ಬಂತು. ದೇವರನ್ನು ಕಾಣುವ ತವಕ "ಓಡಿ ಬಾರಯ್ಯ ವೈಕುಂಠಪತಿ" ಯಲ್ಲಿ ಭೈರವಿ ರಾಗದಲ್ಲಿ, ಅವನ ಕೃಪೆ ಇದ್ದರೆ ಸಾಕು, ಗ್ರಹಗಳೆಲ್ಲ ಅವನ ಅಧೀನ ಎಂದು ಸಾರುವ "ಸಕಲ ಗ್ರಹ ಬಲ ನೀನೆ ಸರಸಿಜಾಕ್ಷ" ರಾಗ ಅಠಾಣ ದಲ್ಲಿ, ಮತ್ತು "ಪೊಗದಿರೆಲೋ ರಂಗ" ಶಂಕರಭರಣದಲ್ಲಿ, "ನಾ ನಿನ್ನ ಧ್ಯಾನದೊಳಿರಲು" ಕಾನಡ ರಾಗದಲ್ಲಿ, ಕಾಂಬೋಧಿಯಲ್ಲಿ "ಕೃಷ್ಣಮೂರ್ತಿ ಕಣ್ಣ ಮುಂದೆ", ಕಡೆಯಲ್ಲಿ "ಬಂದನೇನೇ ರಂಗ" ಶ್ರೀ ರಾಗದಲ್ಲಿ ಮಾಲಿಕೆ ಮುಗಿಯಿತು. "ಇಂದಿನ ದಿನವೇ ಶುಭದಿನವು" ಎನ್ನುತ್ತಾ ಸುರುತಿ ರಾಗದಲ್ಲಿ ನವರತ್ನ ಮಾಲಿಕೆಗೆ ತೆರೆ ಎಳೆದರು.

ಮುಂದೆ ಚಿಕ್ಕ ಮಕ್ಕಳು ತಮ್ಮ ಸಂಗೀತವನ್ನು, ಗಾಯನವನ್ನು ವಿವಿಧ ರಾಗಗಳಲ್ಲಿ - ದಾಸರ "ಗಜವದನ ಬೇಡುವೆ", "ಯಾರೇ ರಂಗನ", " ತಾರಕ್ಕ ಬಿಂದಿಗೆ", "ಪಂಢರ ಪುರವೆಂಬ", "ಕೈಯ್ಯ ತೋರೋ ಕರುಣಿಗಳರಸನೇ ", "ತಂಬೂರಿ ಮೀಟಿದವ", "ಶರಣು ಸಿದ್ಧಿ ವಿನಾಯಕ" ಹಾಡುಗಳೊಂದಿಗೆ ಸಮರ್ಥವಾಗಿ ನಿಭಾಯಿಸಿದರು.

ವಿವಿಧೋಪಚಾರ

ವಿಠ್ಠಲನಿಗೆ ಸಾಮಾನ್ಯ ಜನರಾದ ನಾವು ಹೇಗೆ ಮೆಚ್ಚಿಸಬೇಕು ? ಈ ಪ್ರಶ್ನೆಗೆ ಉತ್ತರವೆಂಬಂತೆ ದಾಸರ ಕೃತಿಗಳು, ಉಗಾಭೋಗಗಳು - ವಿವಿಧ ಕಲಾವಿದರು ಹಾಗು ಸಂಗೀತಾಸಕ್ತರು ಪ್ರಸ್ತುತ ಪಡಿಸಿದರು. "ಏಳಯ್ಯ ಬೆಳಗಾಯಿತು" ಎಂದು ಕೃಷ್ಣ ರಾಮರತಿನಂ ಅವರ ತಂಡ ಕೆಲವು ಉಗಾಭೋಗಗಳಿಂದ ಕೂಡಿ ಬೌಳಿ ರಾಗದಿಂದ ಎಬ್ಬಿಸಿದರು.

ಮುಂದಿನ ಪುಟ ನೋಡಿ ...

ಬೃಂದಾವನೀ ಸಾರಂಗದಲ್ಲಿ "ಒಲ್ಲೆನೋ ಹರಿ ಕೊಳ್ಳನೋ ಎಲ್ಲ ಸಾಧನವಿದ್ದು ತುಳಸಿ ಇಲ್ಲದ ಪೂಜೆ", ತುಳಸಿಯ ಮಹತ್ವ ತಿಳಿಸಿತು. "ನೈವೇದ್ಯವ ಕೊಳ್ಳೋ" ಹಾಡಿದ ಪುಷ್ಪ ಜಗದೀಶ್ ಅವರ ತಂಡ ನಮ್ಮ ಕಣ್ಣ ಮುಂದೆಯೇ ಕೃಷ್ಣನಿಂಗೆ ಉಣಿಸಿದರೇನೋ ಅನ್ನುವಷ್ಟು ಭಾವಪೂರ್ಣವಾಗಿ ಮೂಡಿ ಬಂತು. 'ನಲವತ್ತು ಶಾಖಗಳು' ಎಂಬ ನುಡಿಗೆ ಬರುವ ಅರ್ಥ ಡಾ|| ಗಿರಿಧರ್ ಅವರು ತಿಳಿಸಿದರು. ರಾಗಮಾಲಿಕೆಯಲ್ಲಿ ಇದ್ದ ಈ ಉಪಚಾರ ಜನರ ಮೆಚ್ಚುಗೆಗೆ ಪಾತ್ರವಾಯಿತು. ಹಂಸಾನಂದಿಯಲ್ಲಿ "ಶೋಭಾನ ಶೋಭಾನವೇ" ಮತ್ತು ರಾಗಮಾಲಿಕೆಯಲ್ಲಿ "ಕ್ಷೀರಾಬ್ಧಿ ಕನ್ನಿಕೆ" ಶ್ರೀಲಕ್ಷ್ಮೀ ದೇವಿಗೆ ನಮನವಿತ್ತು, "ತಾಂಬೂಲವ ಕೊಳ್ಳೋ " ರೀತಿಗೌಳದಲ್ಲಿ ಉಪಚಾರಿಸಿದರು. "ಧೂಪಾರತಿಯ ಮಾಡುವ ಬನ್ನಿರೇ" - ಇದು ಹಿಂದೂಸ್ತಾನಿ ಶೈಲಿಯಲ್ಲಿ ಆರತಿ ಮಾಡಿ, "ಪವಡಿಸು ಪರಮಾತ್ಮನೇ" , "ತೂಗಿರೆ ರಂಗನ ತೂಗಿರೆ ಕೃಷ್ಣನ" ಪಾಡುತ್ತ ಶಯನೋತ್ಸವ ಉಪಚಾರ ಮಾಡಿದರು.

ಡಾ|| ಮಂಗಲಂಪಲ್ಲಿ ಬಾಲಮುರಳಿಕೃಷ್ಣ - ಕರ್ನಾಟಕ ಸಂಗೀತಕ್ಕೆ ಬಂದ ಮಹಾನ್ ಗಾಯಕ ಈಗ ನಮ್ಮೊಂದಿಗೆ ಇಲ್ಲ. ೨೦೧೬ ರಲ್ಲಿ ತೀರಿಕೊಂಡ ಇವರು ತಮ್ಮ ಲನೇ ವಯಸ್ಸಿನಿಂದಲೇ ಸಂಗೀತ ಕಛೇರಿ ಕೊಟ್ಟವರು. ಅವರ ಸ್ಮರಣಾರ್ಥವಾಗಿ ಒಂದು ನಿಮಿಷ ಮೌನ ಆಚರಿಸಲಾಯಿತು. ಇವರು ಹಾಡಿದ ಅನೇಕ ಪುರಂದರ ದಾಸರ ಕೃತಿಗಳು ಇಂದಿಗೂ ಜನ ಸಾಮಾನ್ಯರ ನಾಲಿಗೆಯಲ್ಲಿ ಹರಿದಾಡುತ್ತಿದೆ - ಯೌಟ್ಯೂಬ್ನಲ್ಲಿ ನೋಡಬಹೌದು, ಕೇಳಬಹುದು.

ಕಾರ್ಯಕ್ರಮದ ಮುಕ್ತಾಯಕ್ಕೆ ಭಜನ್ ಸಂಧ್ಯಾ ತಂಡದಿಂದ "ಭಾಗ್ಯದ ಲಕ್ಷ್ಮಿ ಬಾರಮ್ಮ" ಹಾಡಿ, "ಪುರಂದರ ಗುರುಮ್ ವಂದೇ, ದಾಸ ಶ್ರೇಷ್ಠ ದಯಾನಿಧಿಮ್" ಎಂದು ವಂದಿಸುತ್ತಾ ನೆರೆದ ಎಲ್ಲ ಜನರ ಬಾಯಲ್ಲಿ "ವಿಠ್ಠಲ ವಿಠ್ಠಲ" ಎನ್ನಿಸುತ್ತ ಕಾರ್ಯಕ್ರಮಕ್ಕೆ ಇತಿಶ್ರೀ ಹಾಡಿದರು. ನಂತರ ಎಲ್ಲರೂ ಪ್ರಸಾದ ಸ್ವೀಕರಿಸಿದರು.

"ಹರಿದಾಸರ ಸಂಘ ದೊರಕಿತು ಎನಗೀಗ ಇನ್ನೇನ್ ಇನ್ನೇನು, ವರಗುರು ಉಪದೇಶ ನೆರವಾಯಿತು ಎನಗೀಗ ಇನ್ನೇನ್ ಇನ್ನೇನು". ಹದಿನೇಳು ವರ್ಷಗಳಿಂದ ಈ ಆರಾಧನೆ ನಡೆಯುತ್ತಿದ್ದು ಮುಂದೆಯೂ ಹೀಗೆ ಜನರಿಂದ, ಪ್ರಮುಖವಾಗಿ ಯುವಜನರಿಂದ ಪ್ರೋತ್ಸಾಹ ಖಂಡಿತ ಸಿಗುವಂತಾಗಲಿ. ▪

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸಂಗೀತ ರಸಸಂಜೆ

ಆರ್. ಶ್ರೀನಾಥ್

ವಿಶಿಷ್ಟ ರೀತಿಯ ಸಂಗೀತಕಾರ್ಯಕ್ರಮಗಳ ಆಯೋಜನೆಯ ಮೂಲಕ ಕನ್ನಡ ಚಿತ್ರಸಂಗೀತ, ಸುಗಮಸಂಗೀತ ಮತ್ತು ರಂಗಸಂಗೀತದ ವೈವಿಧ್ಯತೆಗಳನ್ನು ಪಸರಿಸುವ ಉದ್ದಿಶ್ಯ ಹೊಂದಿರುವ 'ರಾಗಮಾಧುರಿ' ಸಂಸ್ಥೆ, ಕನ್ನಡ ಚಲನಚಿತ್ರರಂಗವನ್ನು ಶ್ರೀಮಂತಗೊಳಿಸಿದ ಹಿನ್ನೆಲೆಗಾಯಕ-ಗಾಯಕಿಯರು, ಸಾಹಿತಿಗಳು, ಸಂಗೀತ ನಿರ್ದೇಶಕರುಗಳ ಬಗೆಗೂ ವಿಸ್ತøತವಾದ ಬೆಳಕು ಚೆಲ್ಲುವ ಪ್ರಯತ್ನ ನಡೆಸಿದೆ. ಈ ಸಂಬಂಧವಾಗಿ ಸಂಸ್ಥೆಯ ಮುಂದಿನ ಕಾರ್ಯಕ್ರಮವಾಗಿ, ಮಾಧುರ್ಯಸಾರ್ವಭೌಮ ಡಾ||ಪಿ.ಬಿ.ಶ್ರೀನಿವಾಸ್ ಮತ್ತು ಸಂಗೀತ ರಸಋಷಿ ವಿಜಯಭಾಸ್ಕರ್ ಅವರುಗಳ ಮಧುರ ನೆನಪು (``ನೀ ತಂದ ಕಾಣಿಕೆ ನಗೆಹೂವ ಮಾಲಿಕೆ..'' - ಸಂಗೀತ ರಸಸಂಜೆ) ಇತ್ತೀಚೆಗೆ 2.2.2017ರಂದು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಿತು.

ಕನ್ನಡ ಚಿತ್ರರಂಗಕ್ಕೆ, ನಾಡು ಕಂಡ ಇನಿದನಿಯ ಗಾಯಕ ಡಾ||ಪಿ.ಬಿ.ಶ್ರೀನಿವಾಸ್ ಮತ್ತು ಸಂಗೀತನಿರ್ದೇಶಕ ವಿಜಯಭಾಸ್ಕರ್ ಅವರುಗಳ ಕೊಡುಗೆ ಅನನ್ಯ. ಕನ್ನಡ ಚಿತ್ರಸಂಗೀತ ಇವರ ಅನುಪಮ ಕಾಣಿಕೆಗಳಿಂದ ಶ್ರೀಮಂತಗೊಂಡಿದೆ. `ರಾಣಿ ಹೊನ್ನಮ್ಮ', `ಸಂತ ತುಕಾರಾಂ', `ನಾಂದಿ', `ಉಯ್ಯಾಲೆ', `ಸೀತಾ', `ಗೆಜ್ಜೆಪೂಜೆ', `ಶರಪಂಜರ', `ಹೃದಯ ಸಂಗಮ', `ಬಾಳು ಬೆಳಗಿತು', `ಅನಿರೀಕ್ಷಿತ', `ಮುಕ್ತಿ', `ಭೂಪತಿ ರಂಗ', `ಮಣ್ಣಿನ ಮಗ', `ಉಪಾಸನೆ', `ಶುಭಮಂಗಳ', `ಮಾನಸ ಸರೋವರ', ಮೊದಲಾದ ಅನೇಕ ಸದಭಿರುಚಿಯ ಚಿತ್ರಗಳ ನೂರಾರು ಚಿತ್ರಗೀತೆಗಳು ಇವರಿಬ್ಬರ ಒಡನಾಟದಲ್ಲಿ ಸಮಸ್ತ ಕನ್ನಡಿಗರ ಕಿವಿಗಳಿಗೆ ಅಮೃತಧಾರೆ ಎರೆದಿದೆ. ಅಂತೆಯೇ ಈ ಇಬ್ಬರು ಮಹನೀಯರ ಹೆಸರುಗಳು ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಚಿರಸ್ಥಾಯಿ. ಹಾಗಾಗಿ ಇವರಿಬ್ಬರ ಮಧುರ ನೆನಪಿನಲ್ಲಿನ ಸಂಗೀತಸಂಜೆ ಅಂದಿನ ಕಾರ್ಯಕ್ರಮದ ವಿಶೇಷತೆ.

ಈ ಸಂಗೀತ ಕಾರ್ಯಕ್ರಮಕ್ಕೆ ಹಿರಿಯ ಕನ್ನಡ ಚಲನಚಿತ್ರ ನಟರಾದ ಪ್ರಣಯರಾಜ ಡಾ||ಶ್ರೀನಾಥ್ ಮತ್ತು ಹೆಸರಾಂತ ಸಾಹಿತಿ, ಸಂಗೀತ ನಿರ್ದೇಶಕರಾದ ವಿ.ಮನೋಹರ್ ಅವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿ, ಡಾ||ಪಿ.ಬಿ.ಶ್ರೀನಿವಾಸ್ ಮತ್ತು ವಿಜಯಭಾಸ್ಕರ್ ಅವರುಗಳ ಜೊತೆಗಿನ ತಮ್ಮ ನೆನಪುಗಳನ್ನು ಹಂಚಿಕೊಂಡರು. ``ನನ್ನ ಚಲನಚಿತ್ರ ಜೀವನದಲ್ಲಿ ಮರೆಯಲಾಗದ ಇಬ್ಬರು ವ್ಯಕ್ತಿಗಳು ಪುಟ್ಟಣ್ಣಾಜಿ ಮತ್ತು ಕೆ.ಎಸ್.ಎಲ್.ಸ್ವಾಮೀ. ಹಾಗೆಯೇ ಇವರಿಬ್ಬರ ಚಿತ್ರಗಳಲ್ಲಿನ ಅವಿಭಾಜ್ಯ ಅಂಗಗಳಾದ ಡಾ||ಪಿ.ಬಿ.ಶ್ರೀನಿವಾಸ್ ಮತ್ತು ವಿಜಯಭಾಸ್ಕರ್ ಅವರುಗಳ ಜೊತೆ ಅತ್ಯಂತ ಸ್ನೇಹಮಯ, ಸಂಗೀತಮಯ ಸಮಯವನ್ನು ನಾನು ಕಳೆದಿದ್ದೇನೆ. ಅವರಿಬ್ಬರೊಡನೆ ಮಧುರ ಬಾಂಧವ್ಯವನ್ನು ಸವಿದಿದ್ದೇನೆ'', ಎನ್ನುತ್ತಾ ನಾಯಕ ನಟ ಶ್ರೀನಾಥ್ ತಮ್ಮ ಅಭಿನಯದ ಸಿ.ಐ.ಡಿ.72 ಮತ್ತು ಮಾನಸ ಸರೋವರ ಚಿತ್ರಗಳ ಕೆಲವು ಘಟನೆಗಳನ್ನು ರಸವತ್ತಾಗಿ ಸಂಗೀತಪ್ರೇಮಿಗಳ ಜೊತೆ ಹಂಚಿಕೊಂಡರು.

ಸಂಗೀತನಿರ್ದೇಶಕ ವಿ.ಮನೋಹರ್ ಮಾತನಾಡುತ್ತಾ, ``ಮಧುರ ಧ್ವನಿಯ ಗಾಯಕ ಡಾ||ಪಿ.ಬಿ.ಶ್ರೀನಿವಾಸ್ ಅವರಿಂದ ನಾನು ಹಾಡಿಸಲಾಗಲಿಲ್ಲವಲ್ಲಾ ಎಂಬ ವಿಷಾದವಿದೆ, ಆದರೆ ವಿಜಯಭಾಸ್ಕರ್ ಅವರ ಸ್ವರಸಂಯೋಜನೆಯಲ್ಲಿ ನನ್ನ ಸಾಹಿತ್ಯ ಹಾಡಾಗಿದೆ. ಅದು ನನ್ನ ಭಾಗ್ಯ'', ಎಂದರು. ಹಾಗೆಯೇ ಮುಂದುವರೆಸುತ್ತಾ, ಈ ಇಬ್ಬರು ಮಹನೀಯರ ಅತ್ಯುತ್ತಮ ಗೀತೆಗಳನ್ನು ಬಳಸಿಕೊಂಡು ಉತ್ಕøಷ್ಟವಾದ ಸಂಗೀತ ಸಂಜೆಯನ್ನು ಆಯೋಜಿಸಿದ `ರಾಗಮಾಧುರಿ' ಸಂಸ್ಥೆಯನ್ನು ಶ್ಲಾಘಿಸಿದರು.

ಈ ಕಾರ್ಯಕ್ರಮದಲ್ಲಿ ನಾಡಿನ ಖ್ಯಾತ ಹಿನ್ನೆಲೆಗಾಯಕಿಯಾದ ಶ್ರೀಮತಿ ಮಂಜುಳಾ ಗುರುರಾಜ್ ಮತ್ತು ರಾಜ್ಯಪ್ರಶಸ್ತಿ ವಿಜೇತ ಲೇಖಕ ಮತ್ತು ಗಾಯಕರಾದ ಶ್ರೀ ಆರ್.ಶ್ರೀನಾಥ್ ಅವರುಗಳ ಧ್ವನಿಯಲ್ಲಿ ವಿಜಯಭಾಸ್ಕರ್ ಸ್ವರಸಂಯೋಜನೆಯ ಜಯತು ಜಯ ವಿಠಲ, ಮೌನವೇ ಆಭರಣ, ಭಾರತ ಭೂಷಿರ ಮಂದಿರ ಸುಂದರಿ, ಮನಸೇ ನಗಲೇಕೆ ಹರುಷದಿ ನೀನು ಈ ದಿನ, ಹಾರುತ ದೂರ ದೂರ, ಕಮಲದ ಹೂವಿಂದ, ಕಲ್ಲು ಕವಿತೆಯ ಹಾಡುವುದು, ಹಕ್ಕಿಯು ಹಾರುತಿದೇ, ಬೆಳದಿಂಗಳಿನಾ ನೋರೆಹಾಲು, ಮೊದಲಾದ ಸುಮಧುರ ಗೀತೆಗಳು ಕಿಕ್ಕಿರಿದು ನೆರೆದಿದ್ದ ಸಂಗೀತಪ್ರೇಮಿಗಳನ್ನು ತಣಿಸಿದವು. `ಅರಿಶಿನ ಕುಂಕುಮ' ಚಿತ್ರದ ಇಳಿದು ಬಾ ತಾಯಿ, `ಶರಪಂಜರ' ಚಿತ್ರದ ಕೊಡಗಿನ ಕಾವೇರಿ, `ಸೀತಾ' ಚಿತ್ರದ ಬರೆದೆ ನೀನು ನಿನ್ನ ಹೆಸರ, ಗೀತೆಗಳಲ್ಲಿನ ಕೋರಸ್ ಧ್ವನಿಗಳನ್ನು ನಗರದ ಸಾಧನಾ ಸಂಗೀತ ಶಾಲೆಯ ವಿದ್ಯಾರ್ಥಿನಿಯರು ಸಮರ್ಥವಾಗಿ ಪ್ರಸ್ತುತಪಡಿಸಿದರು.

ಕನ್ನಡ ಚಲನಚಿತ್ರ ಹಿನ್ನೆಲೆಗಾಯನದಲ್ಲಿ ಅಪಾರ ಸೇವೆ ಸಲ್ಲಿಸಿದ ಶ್ರೀಮತಿ ಮಂಜುಳಾ ಗುರುರಾಜ್ ಅವರನ್ನು ಗಾಯಕ, ಲೇಖಕ ಆರ್. ಶ್ರೀನಾಥ್ ಮತ್ತು ಹಿರಿಯ ಪತ್ರಕರ್ತ, ರಾಷ್ಟ್ರಪ್ರಶಸ್ತಿ ವಿಜೇತ ಲೇಖಕ ದೊಡ್ಡಹುಲ್ಲೂರು ರುಕ್ಮೋಜಿ ಅವರುಗಳು ಆತ್ಮೀಯವಾಗಿ ಸನ್ಮಾನಿಸಿದರು. ಅಲ್ಲದೆ, ಡಾ||ಪಿ.ಬಿ.ಶ್ರೀನಿವಾಸ್ ಅವರ ವಿಶೇಷ ಅಭಿಮಾನಿಯಾದ ಇಳಕಲ್ಲಿನ ಶ್ರೀ ರವೀಂದ್ರ ದೇವಗಿರಿಕರ್ ಅವರನ್ನೂ ಸಹ ವಿಶೇಷವಾಗಿ ಪರಿಚಯಿಸಿ, ಸನ್ಮಾನಿಸಲಾಯಿತು.

ಕನ್ನಡ ಚಿತ್ರಸಂಗೀತ, ಸುಗಮಸಂಗೀತ, ಆಧುನಿಕ ರಂಗಭೂಮಿ, ಸಾಹಿತ್ಯ ಕ್ಷೇತ್ರದ ಗಣ್ಯರು, ಮಾಧ್ಯಮ ಪ್ರತಿನಿಧಿಗಳು ಜೊತೆಗೆ ಅಪಾರ ಸಂಖ್ಯೆಯಲ್ಲಿ ಸಂಗೀತಪ್ರೇಮಿಗಳೂ ಭಾಗವಹಿಸಿದ್ದ ಈ ಸಂಗೀತ ಸಂಜೆ ಎಲ್ಲರ ನೆನಪಿನಲ್ಲಿ ಒಂದು ಸ್ಮರಣೀಯ ಕಾರ್ಯಕ್ರಮವಾಗಿ ಉಳಿಯುವಲ್ಲಿ ಯಶಸ್ವಿಯಾಯಿತು. ▪



ಬದುಕಿಗಾರ್ ನಾಯಕರು, ಏಕನೋ ಅನೇಕರೋ? |
ವಿಧಿಯೋ ಪೌರುಷವೋ ಧರುಮವೋ ಅಂಧಬಲವೋ? ||
ಕುದುರುವುದೆಂತು ಈಯವ್ಯವಸ್ಥೆಯ ಪಾಡು? |
ಅದಿಗುದಿಯೆ ಗತಿಯೇನೋ?-ಮಂಕುತಿಮ್ಮ ||

ಬದುಕಿಗಾರ್=ಬದುಕಿಗೆ+ಆರ್, ಧರುಮವೋ=ಧರ್ಮವೋ, ಅಂಧಬಲವೋ=ಅಂಧ ಶ್ರದ್ಧೆಯೋ,
ಈಯವ್ಯವಸ್ಥೆಯ=ಈ+ಅವ್ಯವಸ್ಥೆಯ, ಅದಿಗುದಿ=ಸಂದೇಹ ಅಥವಾ ತಳಮಳ.

ಈ ಬದುಕಿಗೆ ಯಾರು ನಾಯಕರು? ಒಬ್ಬನೋ ಅಥವಾ ಅನೇಕರಿದ್ದಾರೆಯೋ? ಅಥವಾ ಈ ಬದುಕಿಗೆ ನಾಯಕ ವಿಧಿಯೋ, ಧರ್ಮವೋ, ಅಥವಾ ಅಂಧಶ್ರದ್ಧೆಯೋ? ಅವ್ಯವಸ್ಥೆ ಸರಿಯಾಗುವುದೋ ಇಲ್ಲವೋ? ಅಥವಾ ಇವೆಲ್ಲರದರ ವಿಚಾರದ ತಳಮಳದಲ್ಲಿಯೇ ನಾವು ಯಾವಾಗಲೂ ಇರಬೇಕೆ? ಈ ರೀತಿಯ ಪ್ರಶ್ನೆಗಳನ್ನು ಸನ್ಮಾನ್ಯ ಡಿ.ವಿ. ಗುಂಡಪ್ಪನವರು ತಮ್ಮನ್ನೇ ತಾವು ಕೇಳಿಕೊಳ್ಳುತ್ತಾ, ಓದುಗರ ಮುಂದೆ ಪ್ರಸ್ತಾಪಿಸುತ್ತಾರೆ.

ಈ ರೀತಿಯ ಸಂದೇಹಗಳು ಎಲ್ಲ ಕಾಲಕ್ಕೂ ಎಲ್ಲ ವಿಚಾರವಂತರಿಗೂ ಮನದಲ್ಲಿ ಉದ್ಭವವಾಗುತ್ತದೆ. ‘‘ಕಿಮೇಕಂ ದೈವತಂ ಲೋಕೆ? ಕಿಂ ವಾಪ್ಯೇಕಂ ಪರಾಯಣಂ? ಸ್ತುವನ್ತಃ ಕಂಕಮರ್ಚಂತಃ ಪ್ರಾಪ್ನುಯುರ್ಮಾನವಾಃ ಶುಭಂ? ಕೋ ಧರ್ಮಃ ಸರ್ವ ಧರ್ಮಾಣಾಂ ಭವತಃ ಪರಮೋ ಮತಃ? ಕಿಂ ಜಪನ್ಮುಚ್ಯತೇರ್ಜಂತುರ್ ಜನ್ಮ ಸಂಸಾರ ಬಂಧನಾತ್’’ ಇವು ಮಹಾಭಾರತದಲ್ಲಿ ಧರ್ಮರಾಯನು ಭೀಷ್ಮರು ಶರ ಶಯ್ಯೆಯಲ್ಲಿರುವಾಗ, ಸಂಜೆ ನಡೆಯುವ ಸತ್ಸಂಗದಲ್ಲಿ ಕೇಳುವ ಪ್ರಶ್ನೆ. ಒಬ್ಬನೇ ದೇವನಾರು? ಎಲ್ಲಕ್ಕಿಂತ ಮಿಗಿಲಾದ ಧರ್ಮವಾವುದು? ಎಂಬ ಸಂದೇಹಗಳು ಧರ್ಮರಾಯನಿಗೇ ಬರುವುದಾದರೆ, ಇನ್ನು ನಮಗೆ ಎಂತಹ ಸಂದೇಹಗಳು ಬರಬೇಕು ಹೇಳಿ? ಇದು ಸಹಜ. ಈ ಸೃಷ್ಟಿಯ ರಹಸ್ಯವನ್ನು ಛೇಧಿಸಲು ಅಷ್ಟು ಸುಲಭವೇ?

ದೇವನೊಬ್ಬ ನಾಮ ಹಲವು ಎಂಬ ಮಾತು ಎಲ್ಲರಿಗೂ ಗೊತ್ತಿರುವುದೇ. ಆದರೆ ಆ ದೇವನಾರು? ಮೂರ್ತರೂಪದಲ್ಲಿಹನೆ? ಅಥವಾ ಅಮೂರ್ತನೆ? ಅಂದರೆ ಆಕಾರ ಉಂಟೆ, ಇಲ್ಲವೇ? ಆ ಜಗತ್ತಿಗೆ ಮತ್ತು ಜಗತ್ತಿನ ಜೀವಿಗಳಿಗೆ ಅವನು ನಾಯಕನೇ? ಧರ್ಮಕ್ಕೆ ನಮ್ಮಲ್ಲಿ ಬಹಳ ಪ್ರಾಧಾನ್ಯವಿದೆ. ಧರ್ಮವೆಂದರೆ, ಒಂದು ವಸ್ತುವಿನ ಸ್ವಭಾವ ಎನ್ನುವ ಅರ್ಥವೂ ಇದೆ. ಹಾಗೆಯೇ, ಧರ್ಮಕ್ಕೆ ಬೇರೆ ಬೇರೆಯವರು ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಹಾಗಾಗಿ ಜಗತ್ತಿನಲ್ಲಿ ಇಷ್ಟೊಂದು ಭಿನ್ನ-ಭಿನ್ನ ಮತಗಳು. ಅಂತಹ ಧರ್ಮವೇ ಈ ಜಗತ್ತಿನ ನಾಯಕನೇ? ಎನ್ನುವ ಪ್ರಶ್ನೆಯೂ ಸಹ ಬರುತ್ತದೆ. ವಿಧಿ ಎಂದರೆ ಪೂರ್ವ ನಿಯಮಿತ ಅಥವಾ ನಿರ್ಧಾರಿತ ಕ್ರಮ ಎಂದು ಅರ್ಥ. ಮೊದಲೇ ವಿಧಿಸಿದ ರೀತಿ, ಹಣೆಯ ಬರಹವೆಂದೂ ಅನ್ನುತ್ತಾರೆ. ನಮ್ಮ ಬದುಕನ್ನು ನಡೆಸುವುದು ಈ ಹಣೆಯ ಬರಹವೇ? ಯಾವುದಾದರೂ ಆಗಲಿ ಅಥವಾ ಇರಲಿ, ಈ ಜಗತ್ತಿನ ಅಸಮತೆ, ಅಸಮಾನತೆ, ವೈಚಿತ್ರ್ಯ, ಅಥವಾ ಅವ್ಯವಸ್ಥೆಯು ಸರಿಯಾಗುವ ಬಗೆ ಇದೆಯೋ ಇಲ್ಲವೇ? ಅಥವಾ ಇದನ್ನು ಅರಿಯುವ ಮತ್ತು ನಿರ್ಧರಿಸುವ ತಳಮಳದಲ್ಲಿಯೇ ನಾವು ಎಂದಿಗೂ ಇರಬೇಕೆ? ಎನ್ನುತ್ತಾರೆ ಮಾನ್ಯ ಗುಂಡಪ್ಪನವರು ಈ ಮುಕ್ತಕದಲ್ಲಿ.

ದೇವರನ್ನೇ ನಂಬುವ, ದೇವರನ್ನು ಮತ್ತು ಧರ್ಮವನ್ನು ನಂಬುವ (ಇಲ್ಲಿ ಧರ್ಮ ಬೇರೆಯಲ್ಲ ದೇವರು ಬೇರೆಯಲ್ಲ ಎಂಬ ವಾದ ಮಾಡುವವರೂ ಉಂಟು) ದೇವರನ್ನು ಮತ್ತು ವಿಧಿಯನ್ನು ಎಂದರೆ ಹಣೆಬರಹವನ್ನೇ ನಂಬುವ ಮತ್ತು ಸ್ವಶಕ್ತಿಯನ್ನೇ ನಂಬುವ, ಎಲ್ಲ ರೀತಿಯ ಜನರು ಜಗತ್ತಿನ ಎಲ್ಲೆಡೆಯಲ್ಲೂ, ಎಲ್ಲ ಮತಗಳಲ್ಲೂ ಇದ್ದಾರೆ. ಕಾರಣವೇ ತಿಳಿಯದ, ಈ ಜಗತ್ತಿನ ಅಸಮಾನತೆ, ಜಗತ್ತಿನಲ್ಲಿ ಎಲ್ಲೆಲ್ಲೂ ಇದೆ ಅಲ್ಲವೆ? ಇದು ಏಕೆ ಹೀಗೆ? ಇದು ಸರಿಯಾಗುವುದೋ ಇಲ್ಲವೋ? ಎನ್ನುವ ನೆನೆಗುದಿಯಲ್ಲೇ ಮಾನವರು ಬದುಕು ದೂಡುತ್ತಿದ್ದಾರೆ. ಇಂತಹ ಭಾವಗಳನ್ನೇ ವ್ಯಕ್ತಪಡಿಸುತ್ತಾರೆ ಮಾನ್ಯ ಗುಂಡಪ್ಪನವರು, ಈ ಮುಕ್ತಕದಲ್ಲಿ. ಇಂತಹ ಸಂದೇಹಗಳು ನಮ್ಮ-ನಿಮ್ಮ ಮತ್ತು ಸಕಲರಲ್ಲೂ ಉಂಟಾಗುತ್ತದಲ್ಲವೇ?▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಶ್ವಾನ ಚರಿತೆಯೂ ಸ್ವಾತಂತ್ರ್ಯ ಹೋರಾಟವೂ

ಎಂದಿನಂತೆ ಕುಪ್ಪೆತೊಟ್ಟಿಯ ಎಡಮೂಲೆಯಲ್ಲಿ ಶ್ವಾನಸಭೆ ಸೇರಿತ್ತು.

"ಶ್ವಾನಜ್ಜ, ನಾಯಿಗಳು ರಾಜಕಾರಣಕ್ಕೆ ಸೇರುತ್ತವೆಯೆ?" ಪುಟ್ಟಾಯಿಮರಿ ಕೇಳಿತು.

"ಛೆ! ಬಿಡ್ತು ಅನ್ನು. ರಾಜಕೀಯ ನಾಯಿಗಳಿಗಲ್ಲ, ಅದು ನಾಯಕರಿಗೆ ಮಾತ್ರ ಮೀಸಲಾದುದು. ನಾವು ನಿಯತ್ತಿಗೆ ಹೆಸರಾದವರು. ನಿಯತ್ತಿನವರು ರಾಜಕಾರಣಕ್ಕೆ ಇಳಿದರೆ ಮಡಿ ಅಜ್ಜಿಯರು ಹತ್ತಿರ ಹೋದ ನಾಯಿಯನ್ನು ಮಡಿಕೋಲಿನಿಂದ ಹೊಡೆದು ಅಟ್ಟುವಂತೆ ಅಟ್ಟಿಬಿಡುತ್ತಾರೆ. ಪ್ರಾಮಾಣಿಕರಿಗೆ ಪಾಕಿಸ್ತಾನವಿದ್ದಂತೆ ನಾಯಿಗಳಿಗೆ ನಾಯಕರ ಬೇಂಬರ್ಸ್. ಶ್ವಾನಕುಲಕ್ಕೇ ಅವಮಾನವಾಗುವಂತಹ ಇಂತಹ ಪ್ರಶ್ನೆಗಳನ್ನು ಕೇಳಬಾರದು" ಗುರುಗುಟ್ಟಿತು ಶ್ವಾನಜ್ಜ.

"ಹಾಗಾದರೆ.... ತಾವರೆಯ ಎಷ್ಟು ನಾಯಿಗಳು ಸ್ವಾತಂತ್ರ್ಯಸಂಗ್ರಾಮದಲ್ಲಿ ಮಡಿದರು ಅಂತ ಒಬ್ರು ದೊಡ್ಡವರು ಕೇಳಿದರು?" ಸಣ್ಣಾಯಿಮರಿ ಕುಳಿತಲ್ಲಿಂದಲೇ ಕುರುಗುಟ್ಟಿತು.

"ನಾಯಿಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದವೆ?" ಕರಿ ಜೂಲುನಾಯಿ ಕೇಳಿತು.

"ಪಾಲ್ಗೊಳ್ಳದೆ ಏನು! ನಮಗೆ ಬಂದೂಕು ಹಿಡಿಯಲು ಆಗದಿರಬಹುದು; ಕತ್ತಿವರಸೆ ಕಲಿಯಲು ಆಗದಿರಬಹುದು; ಬಾಂಬುಗಳನ್ನು ಎಸೆಯಲು ಕೈ ಇಲ್ಲದಿರಬಹುದು. ಆದರೆ ಸ್ವಾತಂತ್ರ್ಯಕ್ಕೆ ಹೋರಾಡಿದ ವೀರಯೋಧರ ಪಡೆಯ ಜೊತೆಜೊತೆಗೆ ತಮ್ಮದೇ ಆದ ವಿಧದಲ್ಲಿ ವೀರಶ್ವಾನಗಳು ಹೋರಾಡಿ ಮಡಿದಿವೆ. ಒಂದು ವಿಧದಲ್ಲಿ ನಾವು ಕೆಲವು ಮನುಜ ನಾಯಕರಿಗಿಂತ ಶ್ರೇಷ್ಠರು. ನಾಯಕನೊಬ್ಬ ಬಿಳಿಯ ತೊಗಲು ಎಂದರೆ ಬಾಯಿಬಿಡುತ್ತಿದ್ದನಂತೆ. ಆದರೆ ನಮ್ಮ ಶ್ವಾನಕುಲ ಎಂದೂ ವಿದೇಶೀ ತಳಿಗಳಿಗೆ ಬಾಲ ಅಲ್ಲಾಡಿಸಲಿಲ್ಲ." ಹಿರಿಶ್ವಾನ ಗರ್ವದಿಂದ ನುಡಿಯಿತು.

"ಯಾವ ವಿಧ ಅದು?"

"ಒಂದೇ... ಎರಡೇ? ಭಾರತದ ಮನುಷ್ಯ ನಾಯಕರಲ್ಲಿ ಕೆಲವರು ಬಿಳಿಯರ ಬೂಟು ನೆಕ್ಕುತ್ತಿದ್ದರು. ಆದರೆ ಶ್ವಾನನಾಯಕರು ಅಂತಹ ಬೂಟುಗಳನ್ನು ರೋಷದಿಂದ ಕಚ್ಚುತ್ತಿದ್ದವು. ಇನ್ನು ಕೆಲವರು ಬಿಳಿಯರ ಕಾಲು ನೆಕ್ಕುತ್ತಿದ್ದರು. ನಮ್ಮ ಕುಲಜರು ಅವರ ಕಾಲನ್ನೂ ಕಚ್ಚುತ್ತಿದ್ದರು. ಇದು ನೇರವಾದ ಅಟ್ಯಾಕ್"

"ಬೇರೆ ವಿಧಗಳೂ ಇದ್ದವೇನು?"

"ಕೆಲವು ಶ್ವಾನಗಳು ಬ್ರಿಟಿಷರ ಪದ್ಧತಿಯನ್ನೇ ಅನುಸರಿಸಿದವು. ಅವರ ಮನೆಗೆ ಸೇರಿ ಅವರನ್ನೇ ದಾರಿತಪ್ಪಿಸುತ್ತಿದ್ದವು. ಬ್ರಿಟಿಷರು ನಾಯಿಯನ್ನು ವಾಕಿಂಗ್ ಕರೆದುಕೊಂಡುಹೋಗುತ್ತಿದ್ದೇವೆ ಎಂಬ ಭ್ರಮೆಯಲ್ಲಿರುತ್ತಿದ್ದರು. ವಾಸ್ತವವಾಗಿ ಪೂಜ್ಯವಾದ ನಮ್ಮ ಹಿರಿಯ ಶ್ವಾನಗಳು ಚೈನನ್ನು ಜಗ್ಗಿದ ಕಡೆಗೆ ಅವರು ಬರಬೇಕಾಗುತ್ತಿತ್ತು. ಭಾರತದವರನ್ನು ದಾರಿ ತಪ್ಪಿಸುತ್ತಿದ್ದ ಬ್ರಿಟಿಷರನ್ನು ನಾವು ಈ ರೀತಿ ದಾರಿ ತಪ್ಪಿಸುತ್ತಿದ್ದೆವು. ನೀನೇ ಹೇಳು, ಆಗ ಯಾರು ಬಾಸ್? ಬ್ರಿಟಿಷನೋ, ನಾಯಿಯೋ?"

"ವಂಡರ್ಫುಲ್." ಎಂದಿತು ಸಣ್ಣಾಯಿಮರಿ

"ವಾಟ್ ಎಬೌಟ್ ದ ಕುದುರೆಗಾಡಿ ಅಟ್ಯಾಕ್? ಮರೆತೆಯೇನು ಅಜ್ಜನಜ್ಜನಜ್ಜನಜ್ಜ ಹೇಳುತ್ತಿದ್ದುದು?" ಕೇಳಿತೊಂದು ಆಲ್ಸೇಷಿಯನ್.

"ಹೌದಲ್ಲವೇ... ಬ್ರಿಟಿಷರ ಕುದುರೆಗಾಡಿಯನ್ನು ಅಟ್ಟಿಸಿಕೊಂಡುಹೋಗಿ ಕುದುರೆಯ ಕಾಲನ್ನು ಕಚ್ಚಿಬಿಡುತ್ತಿದ್ದೆವು. ಗಾಡಿ ಮೂಕಿ ಎದ್ದು, ಒಳಗಿನವರೆಲ್ಲ ಬಿದ್ದಾಗ ಆ ರಸ್ತೆಯಲ್ಲಿದ್ದ ನಾಯಿಗಳೆಲ್ಲ ಸ್ವಾತಂತ್ರ್ಯ ಹೋರಾಟಗಾರರ ಕಾಲುಗಳ ಸುತ್ತಲೂ ಸುತ್ತುತ್ತಾ, ನಮ್ಮ ಸಂತೋಷವನ್ನು ಜೋರಾಗಿ ಬಾಲ ಅಲ್ಲಾಡಿಸುವುದರ ಮೂಲಕ ಸೂಚಿಸುತ್ತಿದ್ದೆವು. ಒಮ್ಮೆ ಆ ತರಹ ಬಾಲಗಳೆಲ್ಲ ಸೇರಿ ಒಟ್ಟಾಗಿ ಬೀಸಿದಾಗ ಉಂಟಾದ ಗಾಳಿಯ ರಭಸಕ್ಕೆ ಸಣಕಲ ಬಿಳಿಯನೊಬ್ಬ ಹಾರಿಹಾರಿಬಿದ್ದಿದ್ದನಂತೆ. ಆದರೂ ಅದು ಸುಖ-ದುಃಖದ ಮಿಶ್ರ ಸನ್ನಿವೇಶ" ಎಂದಿತು ಓಲ್ಡ್ ಡಾಗ್.

"ದುಃಖವೇಕೆ?"

"ದೊರೆಯೇನೋ ಬಿಳಿಯ. ಆದರೆ ಕುದುರೆ ಭಾರತೀಯ. ಬ್ರಿಟಿಷರಿಗೆ ತೊಂದರೆ ಕೊಡಲು ನಮ್ಮವರನ್ನೇ ಕಚ್ಚಬೇಕಾದುದು ದುಃಖಕರವಾಗಿತ್ತು"

"ಅದಕ್ಕೇ ಆಂಟಿಯಾಂಟಿಯಾಂಟಿಯ ಮುತ್ತಜ್ಜಿ ನಾಯಿಯ ಸಿಸ್ಟಮ್ ಇಷ್ಟವಾಗೋದು" ಎಂದಿತು ಸ್ತ್ರೀಶ್ವಾನ.

"ಏನದು?"

"ಕುದುರೆಗೆ ಕಚ್ಚುತ್ತಿರಲಿಲ್ಲ. ಅದರ ಕಾಲುಗಳ ಕೆಳಗೆ ತೂರಿ ಕುದುರೆಯನ್ನು ತಬ್ಬಿಬ್ಬು ಮಾಡುತ್ತಿತ್ತು. ಕುದುರೆ ನಿಂತಾಗ ಇಳಿದ ದೊರೆಯ ಕಾಲುಗಳ ನಡುವೆ ತೂರಿ, ಅವನು ಬೆದರಿ ಬೀಳುವಂತೆ ಮಾಡಿ, ಸಂತೋಷದಿಂದ ಬೊಗಳುತ್ತಾ ಹೋಗುತ್ತಿತ್ತು." ಹೆಮ್ಮೆಯಿಂದ ನುಡಿಯಿತು ಹೆಣ್ಣಾಯಿ.

"ಅದಕ್ಕಿಂತ ಉತ್ತಮವಾದ ಉಪಾಯವೊಂದಿತ್ತು" ನುಡಿಯಿತು ಕಿಲಾಡಿ ಶ್ವಾನ.

ಮುಂದಿನ ಪುಟ ನೋಡಿ ...

“ಯಾವುದು?” ಎಲ್ಲ ಶ್ವಾನಗಳೂ ಒಕ್ಕೊರಲಿನಿಂದ ಕೇಳಿದವು.

“ಬ್ರಿಟಿಷರು ಇದ್ದ ಏರಿಯಾದಲ್ಲೇ ರಾತ್ರಿಯೆಲ್ಲ ಮೊಕ್ಕಾಂ ಹೂಡಿ, ಮಧ್ಯರಾತ್ರಿ ಕಳೆಯುವುದನ್ನೇ ಕಾದಿದ್ದು, ಸಾಧ್ಯವಾದಷ್ಟೂ ತಾರಕ ಸ್ವರದಲ್ಲಿ ಊಊಊಊ ಎಂದು ಊಳಿಡುತ್ತಿದ್ದವು. ಬ್ರಿಟಿಷರು ಹೊರಬರುವಷ್ಟರಲ್ಲಿ ಮೂಲೆ ತಿರುಗಿ ಮುಂದಿನ ಬೀದಿಗೆ ಕಾರ್ಯಾಚರಣೆ ಶಿಫ್ಟ್. ಅಲ್ಲಿನ ಜನರನ್ನು ಊಳಿಟ್ಟು ಎಬ್ಬಿಸಿ, ಅವರು ಅಟ್ಟಿಸಿಕೊಂಡುಬಂದಾಗ ಮೊದಲ ರಸ್ತೆಗೆ ಹಿಂದಿರುಗುತ್ತಿದ್ದವು. ಅಷ್ಟರಲ್ಲಿ ನಿದ್ರೆಗೆ ಜಾರಿರುತ್ತಿದ್ದ ಅವರನ್ನು ಮತ್ತೆ ಊಳಿಟ್ಟು ಎಬ್ಬಿಸುತ್ತಿದ್ದವು. ಅಂತೂ ರಾತ್ರಿಯೆಲ್ಲ ದಾಂದಲೆ ಎಬ್ಬಿಸುತ್ತಿದ್ದರಂತೆ. ಬ್ರಿಟಿಷರಿಗೆ ಬೆಳಗೆಲ್ಲ ಮನುಜ ಸ್ವಾತಂತ್ರ್ಯ ಸೇನಾನಿಗಳು ಮಲಗಲು ಬಿಡುತ್ತಿರಲಿಲ್ಲವಂತೆ. ರಾತ್ರಿ ನಮ್ಮವರ ಪಾಳಿ”

“ಅವರು ಬಂದೂಕಿನಿಂದ ಗುಂಡಿಟ್ಟು ಕೊಲ್ಲುತ್ತಿರಲಿಲ್ಲವೆ?”

“ಹ್ಹ! ಹನ್ನೆರಡರ ಹೊತ್ತಿಗೆ ಕುಡಿದ ಕೈ ಸ್ಥಿಮಿತದಲ್ಲಿರುತ್ತಿರಲಿಲ್ಲವಂತೆ” ನಗುತ್ತಾ ನುಡಿಯಿತು ಡಾಬರ್ಮನ್.

“ಈಗ ಕೆಲವು ಶ್ವಾನಗಳು ಕಾರುಗಳನ್ನು ಅಟ್ಟಿಸಿಕೊಂಡು ಹೋಗುವುದನ್ನು ನೋಡಿರುವಿರಲ್ಲ, ಅದು ಹೆರಿಡಿಟರಿ ಕ್ಯಾರೆಕ್ಟರ್. ಬ್ರಿಟಿಷರನ್ನು ಕಂಡರೆ ಆಗದ ಶ್ವಾನೋತ್ತಮಗಳು ಅವರ ಕಾರು, ಗಾಡಿ, ಸ್ಕೂಟರ್, ಬೈಕ್, ಎಲ್ಲವನ್ನೂ ಅಟ್ಟಿಸಿಕೊಂಡುಹೋಗಿ ಅವರಿಗೆ ಶ್ವಾನಭಯ ಉಂಟುಮಾಡುತ್ತಿದ್ದವು. ಕೋಚ್‌ಗಾಡಿಯಿಂದ ಇಳಿಯಬೇಕಾದರೆ ಹೆದರಿ ಸಾಯುವಂತಾಗಿರುತ್ತಿದ್ದರು ಹಲವಾರು ಬಿಳಿಯರು”

ಕೊಚ್ಚಿಕೊಂಡಿತೊಂದು ಗ್ರೇಟ್ ಡೇನ್.

“ಡೇನಣ್ಣ, ನೀನು, ಆ ಪಾಮರೇನಿಯನ್ನು, ಡಾಬರ್ಮನ್ನು ಎಲ್ಲರೂ ಬ್ರಿಟಿಷರ ವಂಶದವರೇ ಅಲ್ವಾ? ನಿಮ್ಮ ಕುಲದವರು ಅದ್ಹೇಗೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದರು?”

“ಬ್ರಿಟಿಷರು ನಮಗೆ ಮಾಂಸ, ಮೂಳೆ ಎಸೆಯುತ್ತಿದ್ದರು. ಭಾರತೀಯರೇ ನಮಗೆ ಅನ್ನ ಹಾಕುತ್ತಿದ್ದದ್ದು. ಅನ್ನದ ಋಣ ತೀರಿಸುವುದು ಶ್ವಾನಕುಲದ ಅತ್ಯುತ್ತಮ ಧರ್ಮ” ಹೇಳಿತು ಡೇನ್.

“ಬ್ರಿಟಿಷರ ವಿರುದ್ಧ ಪತ್ರಿಕಾಯುದ್ಧ ಸಾರಿದ ಶ್ವಾನದ ಕಥೆ ಹೇಳು ಶ್ವಾನಜ್ಜ...” ಕೇಳಿತೊಂದು ಮರಿಮರಿ

“ಲಾರ್ಡ್ ವೆಲ್ಲೆಸ್ಲಿ ಕಾಲದ ಕಥೆಯಲ್ಲವೇ.... ಬಹಳ ಚೆನ್ನಾಗಿದೆ. ನನ್ನ ಹಿಂದಿನ ಹನ್ನೆರಡನೆಯ ತಲೆಮಾರಿನ ಶ್ವಾನಣ್ಣನಿಗೆ ವೆಲ್ಲೆಸ್ಲಿ ಎಂದರೆ ಅಸಾಧ್ಯ ದ್ವೇಷ. ಆತನ ಚಿತ್ರ ಭಿತ್ತಿಪತ್ರದಲ್ಲಿದ್ದರೆ ಹಾರಿ ಹರಿದುಹಾಕುತ್ತಿದ್ದನಂತೆ. ಆ ಶ್ವಾನಣ್ಣನ ಮನೆಗೆ ದಿನವೂ ದಿನಪತ್ರಿಕೆ ಬರುತ್ತಿತ್ತು. ಮುಖಪುಟದಲ್ಲಿ ವೆಲ್ಲೆಸ್ಲಿಯ ಚಿತ್ರವಿದ್ದರೆ ಗುರುಗುಡುತ್ತಾ ಹಾರಿ, ಕಾಲಿನಿಂದ ಕೊರೆದು, ಹಲ್ಲಿನಿಂದ ಹರಿದು, ಚಿಂದಿ ಮಾಡಿಬಿಡುತ್ತಿತ್ತಂತೆ. ಇದೇ ನಮ್ಮ ಪತ್ರಿಕಾಯುದ್ಧ” ಹೆಮ್ಮೆಯಿಂದ ಹೇಳಿತು ಶ್ವಾನಜ್ಜ.

“ಇಷ್ಟೆಲ್ಲ ಸ್ವಾತಂತ್ರ್ಯ ಹೋರಾಟದ ಇತಿಹಾಸ ಇರುವ ನಮ್ಮ ಬಗ್ಗೆ ತುಚ್ಛವಾಗಿ ಮಾತನಾಡಿದುದು ಸರಿಯೆ?” ಕೇಳಿದ ಶ್ವಾನಜ್ಜ.

ಕೂಡಲೆ ಹಿರಿ-ಕಿರಿ-ಮರಿ-ಮುಮ್ಮರಿ ಶ್ವಾನಗಳು ಧಿಕ್ಕಾರಾತ್ಮಕವಾಗಿ ಬಾಲ ಬೀಸುತ್ತಾ, ವಿವಿಧ ರಾಗಗಳಲ್ಲಿ ಬೊಗಳುತ್ತಾ, ಕ್ರೋಧದಿಂದ ಹಲ್ಲು ಮಸೆಯುತ್ತಾ ವಿಧಾನಸೌಧದತ್ತ ಓಡುನಡಿಗೆಯಲ್ಲಿ ಧಾವಿಸಿದವು. ▪



ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಸಿಡ್ನಿ ಕನ್ನಡ ಶಾಲೆ ಮತ್ತು ಸುಗಮ ಗಾನ ಸಮಾಜ
ಅರ್ಪಿಸುತ್ತಿದೆ
ಸಿಡ್ನಿ
ಯುಗಾದಿ ಹಬ್ಬ
An entertainment evening of
Instrumental classical and filmy music
Dance and skits by Kannada school kids
22nd April 2017
Starts at 06 pm sharp
VENUE - Wattle Grove Public School
Cressbrook Drive
Wattle Grove NSW 2173
Entry $25 per family
Please support to raise funds for Kannada school
PLEASE BOOK FOR
CATERING PURPOSE
Narayana – 0423634979, Deepak-0413607311
Nagabhushan- 0433763911,
Nagaraj-0400836415, Shridhar – 0422549695
or sugamakannada@gmail.com

ಬನವ ಸಮಿತಿ ಸಿಡ್ನಿ
ಅರ್ಪಿಸುವ
Sydney's budding star Aditi Mallikarjun
ನಾಟ್ಯ ನಿವೇದನ ಸ್ಕೂಲ್ ಆಫ್ ಭರತನಾಟ್ಯಂ
ಇವರ ಸಂಯುಕ್ತಾಶ್ರಯದಲ್ಲಿ
ಕರ್ನಾಟಕ ವೈಭವ
ನಮ್ಮ ರಾಜ್ಯದ ಐತಿಹಾನವನ್ನು ವರ್ಣಿಸುವ
ಮನಮೋಹಕ ರಂಜನೆಯ ನೃತ್ಯ ರೂಪಕ
ಡಾ. ಸಂಜಯ್ ಶಾಂತರಾಮ್
ಮತ್ತು ಶಿವಕ್ರಿಯ ಶಿಷ್ಯ ವೃಂದದವರಿಂದ
PROUDLY SUPPORTED BY
INDIAN COUNCIL FOR CULTURAL RELATIONS
TICKETS: 30$/ family or 20$ / individual
DON MOORE COMMUNITY CENTRE
Cnr NORTH ROCKS ROAD AND FARNELL AVENUE
NORTH ROCKS 2151
ಶನಿವಾರ 1ನೇ ಏಪ್ರಿಲ್, 2017
ಸಂಜೆ 6-30 ರಿಂದ
Food available to purchase at the venue
KANNADA FOLK SONGS BY RAMA KUDAVA
CONTACTS
SUDHA PARAMESH: 0400680627
NIKHILA KIRAN : 0433125337
VERTEX
Dakshin Consulting Pty Ltd
Desi Australia
snap
print design websites
Blacktown

ಮುದ್ದು

ಕನಕಾಪುರ ನಾರಾಯಣ

ರವಿ ಒಬ್ಬ ಒಳ್ಳೆಯ ಹುಡುಗ.ಎಲ್ಲರಿಗೂ ಆತನನ್ನು ಕಂಡರೆ ಬಹಳ ಪ್ರೀತಿ.ಆತನನ್ನು ಅತಿ ಮುದ್ದು ಮಾಡಿ ಆತನಿಗೆ ಸ್ವಲ್ಪವೂ ನೋವಾಗದಂತೆ ಜಾಗರೂಕತೆಯಿಂದ ಕಾಣುತ್ತಿದ್ದರು.ಕೇಳುವ ಮೊದಲೇ ಆತನಿಗೆ ಎಲ್ಲಾ ವಸ್ತುಗಳು ಸಿಗುತ್ತಿದ್ದವು.ಅತಿ ಮುದ್ದಿನಿಂದಾಗಿ ಅವನು ಚಿಕ್ಕಪುಟ್ಟ ಕಾರಣಕ್ಕೆ ಅಳುವುದು,ಸಣ್ಣ ವಿಶಯಕ್ಕೆ ಬೇಸರ ಮಾಡಿಕೊಳ್ಳುವುದು, ತನ್ನ ಪಾದರಕ್ಷೆಯಲ್ಲಿ ಚಿಕ್ಕ ಕಲ್ಲು ನುಸುಳಿದರೆ ಪ್ರಾಣವೆ ಹೋದಂತೆ ಆಡುವುದು ಹಾಗೂ ಬಿಸಿಲು ನೆತ್ತಿಗೆ ಒಂದು ನಿಮಿಷ ತಾಕಿದರೆ ಸಾಕು ತಲೆ ಸುತ್ತಿ ಬೀಳುತ್ತಿದ್ದ.ಹೀಗೆಯೇ ಆತ ಅತಿ ನಾಜೂಕು ಆಗಿಹೋದ. ಒಮ್ಮೆ ದಾರಿಯಲ್ಲಿ ನಡೆದು ಹೋಗುವಾಗ ಒಬ್ಬ ತಾಯಿ ತನ್ನ ಮಗುವಿಗೆ "ಸಾಕು ಅತ್ತಿದ್ದು ಏಳೊ, ನೀನೇನು ಅಳುಬುರುಕ ರವೀನಾ? ಏನೂ ಆಗಿಲ್ಲ ಏಳು,ಸುಮ್ಮನೆ ತರಚಿದೆ ಅಷ್ಟೆ ರಕ್ತ ಕೂಡಾ ಬರಲಿಲ್ಲ ಸಾಕು ನಿನ್ನ ನಾಟಕ ನಡಿ"ಎನ್ನುತ್ತಿದ್ದಳು.ಅದನ್ನು ಕೇಳಿ ರವಿಗೆ ಬಹಳ ಬೇಸರವಾಯಿತು. ತನ್ನ ಶಾಲೆಗೆ ಬಂದಾಗ ತನ್ನ ಟೀಚರ್ ಬಳಿ ಹೇಳಿಕೊಂಡ.ಸಂಜೆ ಮನೆಗೆ ಬಂದೊಡನೆಯೆ ತಂದೆಯ ಬಳಿಯೂ ಹೇಳಿಕೊಂಡ ಇಬ್ಬರೂ ಒಂದೇ ಉಪಾಯ ಹೇಳಿಕೊಟ್ಟರು.ಮರುದಿನದಿಂದಲೇ ಅಳವಡಿಸಿಕೊಂಡ.ಮುಂದಕ್ಕೆ ಅಳುಬುರುಕನಾಗದೆ ಸ್ವಶಕ್ತಿ ಅರಿತು ಧೈರ್ಯದಿಂದ ಬಾಳಿದ. ಉಪಾಯ ಇದಾಗಿತ್ತು "ದಿನಕ್ಕೆ ಒಂದು ಮಿಠಾಯಿ ಕಡಿಮೆ ತಿನ್ನು,ದಿನಕ್ಕೆ ಐದು ನಿಮಿಷ ಹೆಚ್ಚಿಗೆ ಓದು, ಅಳುವ ಮೊದಲು ಒಂದರಿಂದ-ಹತ್ತು ಎಣಿಸು" ಇದೇ ಅವನರಿತ ಪಾಠ. ▪

ರೆಸಿಪಿ ಕೊಡ್ತೀರಾ!

ಖರ್ಜೂರದ ರಾಯತ

ಬೇಕಾಗುವ ಸಾಮಗ್ರಿಗಳು

- ಒಂದು ಲೋಟ ಮೊಸರು
- ನೂರು ಗ್ರಾಂ ಖರ್ಜೂರ
- ಒಂದು ಹೋಳು ತೆಂಗಿನತುರಿ
- ಕರಿಮೆಣಸು ನಾಲ್ಕು
- ಉಪ್ಪು ರುಚಿಗೆ

ಮಾಡುವ ವಿಧಾನ

- ಖರ್ಜೂರವನ್ನು ಬೀಜ ತೆಗೆದು, ಮೆಣಸು ಮತ್ತು ತೆಂಗಿನ ಕಾಯಿ ತುರಿಯೊಂದಿಗೆ ಸೇರಿಸಿ ರುಬ್ಬಿಕೊಳ್ಳಿ
- ಅದಕ್ಕೆ ಉಪ್ಪು ಸೇರಿಸಿ ಮೊಸರಿಗೆ ಬೆರೆಸಿ
- ಪುಟ್ಟ ಬಾಣಲೆಯಲ್ಲಿ ತುಪ್ಪದ ಒಗ್ಗರಣೆ ಮಾಡಿ ಮಿಶ್ರಣಕ್ಕೆ ಬೆರೆಸಿ, ಉಣಬಡಿಸಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ಒಗಟು

೧. ತಲೆ ಮೇಲೆ ಹರಳು , ಬಾಯಲ್ಲಿ ಬೆರಳು

೨. ಅರಳುತ್ತೆ , ಹೂವಲ್ಲ ! ಬಿಸಿಲಿಗೆ ಬಾಡುವುದಿಲ್ಲ

ಉತ್ತರಕ್ಕೆ ಪುಟ ೧೦ ನೋಡಿ

ಮಾತೇ ತನುವಿಗೆ ಕಲಶ ...

ಮಾತು ಮುತ್ತೂ ಮೌನ ಚೆನ್ನವು
ಹಸಿರು ಹಸಿರಿನ ನಾಣ್ನುಡಿ
ನುಡಿಯನುಲಿಯುತ ಪ್ರೇಮವೆರೆದರೆ
ಹಸಿರ ಬದುಕಿಗೆ ಮುನ್ನುಡಿ

ಕೋಪ ತಾಪವು ಸಹಜ ಮನುಜಗೆ
ಮಂಜಿನಂತೆಯೆ ಬರುವುದು
ಒಂದು ನಿಮಿಷದ ಮೌನ ಬೆಳಕಲಿ
ಕರಗಿ ನೀರಾಗುವುದದು

ಮುತ್ತಿನಂತೆಯೆ ಮಾತ ಪೋಣಿಸೆ
ಸೊಗವು ಸಿಗುವುದು ಹರುಷದಿ
ಒಳ್ಳೆ ಮಾತಿನ ನಾರಿಕೇಳವು
ಶೋಭೆ ತರುವುದು ಕಲಶದಿ

ಸದ್ವಿಚಾರದ ಮಾತ ಮಥಿಸುತ
ಬುದ್ಧಿಯುಳುಮೆಯ ಮಾಡಲು
ಚೆನ್ನ ಕೃಷ್ಣನ ಗೀತ ಸಾರವು
ಧುನಿಸಿ ಮೊಳೆವುದು ಎದೆಯೊಳು

-ಬದರಿ ತ್ಯಾಮಗೊಂಡ್ಲು

ಜಾಣ ಕರ್ನಾಟಕ

೧. ಇತ್ತೀಚೆಗೆ ಕನ್ನಡದ ಹಿರಿಯ ಪೋಷಕ ನಟಿಯೊಬ್ಬರು, ಕಿರುತೆರೆಯ ಧಾರಾವಾಹಿಯೊಂದರ ಚಿತ್ರೀಕರಣದ ವೇಳೆಯಲ್ಲಿ ಅಸ್ವಸ್ಥರಾಗಿ ನಿಧನರಾದರು. ಅವರು ತಮ್ಮ ಮೊದಲ ಚಿತ್ರದಲ್ಲಿಯೇ ಶ್ರೇಷ್ಠ ಪೋಷಕ ನಟಿ ಎಂದು ರಾಜ್ಯ ಪ್ರಶಸ್ತಿ ಗಳಿಸಿದ್ದರು. ಈ ನಟಿ ಯಾರು? ಅವರ ಮೊದಲ ಚಿತ್ರ ಯಾವುದು?

೨. ಈ ನಟಿಯ ಮೊದಲ ಚಿತ್ರ ಕನ್ನಡದ ಖ್ಯಾತ ಲೇಖಕರ ಕಾದಂಬರಿಯ ಆಧಾರಿತವಾಗಿತ್ತು. ಇದೇ ಲೇಖಕರ ಮತ್ತೊಂದು ಕಾದಂಬರಿ ಇತ್ತೀಚಿನ ವರ್ಷಗಳಲ್ಲಿ ಪಿ. ಶೇಷಾದ್ರಿಯವರ ನಿರ್ದೇಶನದಲ್ಲಿ, ಹಿರಿಯ ನಟ ಹೆಚ್. ಜಿ. ದತ್ತಾತ್ರೇಯರವರ ಅಭಿನಯದಲ್ಲಿ ಚಲನಚಿತ್ರವಾಗಿ ಮೂಡಿ ಬಂದಿತ್ತು. ಇದು ಯಾವ ಚಿತ್ರ ಮತ್ತು ಈ ಕಾದಂಬರಿಗಳ ಲೇಖಕರು ಯಾರು?

ಸರಿ ಉತ್ತರಕ್ಕೆ ಪುಟ ೧೬ ನೋಡಿ

ಒಗಟು – ಉತ್ತರ

೧. ಉಂಗುರ ೨. ಕೊಡೆ

ಹಾಸ್ಯ ಚಿಲುಮೆ

ಗುಂಡ: ಅಪ್ಪಾ ನೀನು ಈಜಿಪ್ಟ್ ಗೆ ಹೋಗಿದ್ಯಾ?

ಅಪ್ಪ: ಇಲ್ಲಾ ಕಣೋ,ಯಾಕೆ?

ಗುಂಡ:ಹಾಗಿದ್ರೆ ಈ ಮಮ್ಮಿ ನಿನ್ನಹತ್ರ ಹ್ಯಾಗೆ ಬಂದಳು?

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

ಪವಿತ್ರ ತಟಾಕ ಈ ಹುಡುಗಿಗೆ ಸೇರಿದ್ದೇನು?

೨. ಕರೆದ ಕೂಡಲೇ ಕಲಕಲ ಸದ್ದು ಮಾಡುತ್ತಾ ಓಡಿ ಬಂದ ಹುಡುಗ.

೩. ಪುರಂದರದಾಸರು ಲಂಬೋದರನ ಮುಖವನ್ನು ಬಣ್ಣಿಸಿದ ಒಂದು ಬಗೆ.

೪. ಬೇರಿನ ನಂತರ ಇರುವ, ಮರದ ಮತ್ತೊಂದು ಪ್ರಮುಖ ಅಂಗ.

೫. ಕದಂಬರ ನಾಡು.

೬. ಹರನ ಈ ಹೆಸರಿನ ಅರ್ಥ ಮಂಗಳಕರನೆಂದು.

೭. ಕುಂದಾಪುರ ಸಮೀಪದ ಪ್ರಕೃತಿಯ ಸೊಬಗಿನ ಈ ಸ್ಥಳವನ್ನು ಮರೆಯುವಂತೆಯೇ ಇಲ್ಲ.

ಭಾರೀ ಜನಜಂಗುಳಿ ಸೇರುವ ಈ ಶಕ್ತಿ ದೇವತೆಯ ಜಾತ್ರೆಯ ಊರಿಗೆ ತಲೆಯೂ ಇದೆ.

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಏಪ್ರಿಲ್ ೧೦ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಫೆಬ್ರವರಿ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಹರಿಣಿ ರಾವ್, ನವದೆಹಲಿ
- ವೀಣಾ ಕೌಶಿಕ್, ಸಿಡ್ನಿ

ಫೆಬ್ರವರಿ ತಿಂಗಳ ಪದಪುಂಜದ ಉತ್ತರ

೧. ಪ್ರಶ್ನೆ ಕೇಳಿದರೆ, ಆ ದಿಕ್ಕು ತನಗೆ ಗೊತ್ತಿಲ್ಲವೆಂದ ಭೂಪ!

ಉ	ತ್ತ	ರ

೨. ಮನೆಗೆ ಸಾಮಾನು ತರಲು ಸಳನ ಈ ಊರಿಗೆ ಹೋಗಲೇ ಬೇಕು

ಅಂ	ಗ	ಡಿ

೩. ಶೇಷನಾದರೂ ಸರಿ ನಾಗನಾದರೂ ಸರಿ, ಮಹಾವಿಷ್ಣುವಿನ ಪಾಲಿಗದು

ಶ	ಯ	ನ

೪. ಚೆಲುಮೆಯಂತೆಯೇ ನೀರು ಚೆಮ್ಮಲು ಮಾನವ ನಿರ್ಮಿಸಿದ್ದು

ಕಾ	ರಂ	ಜಿ

೫. ಶಿವರಾತ್ರಿ ಬರುತ್ತಿದೆ, ಬೇಗ ಹೋಗಿ ತನ್ನಿ ಪೂಜೆಗೆ ಈ ಎಲೆಯನ್ನು

ಬಿ	ಲ್ವ	ಪ	ತ್ರೆ

೬. ತನ್ಮಯರಾದ ಸಂಗೀತಗಾರರು " ನಾ ನಾ ನ", ಎಂದು ಆಲಾಪಿಸುವ ಮುನ್ನ ಬರುವ ಸ್ವರ

ತ	ದ	ರೀ

ಉತ್ತರ: ಕಲಿಯುಗದಲ್ಲಿ ಗಂಗಾವತರಣವ ಮಾಡಿಸಿದ ಕವಿ ವರವ ಪಡೆದಿದ್ದರು

ಅಂ	ಬಿ	ಕಾ	ತ	ನ	ಯ	ದ	ತ್ತ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪





ರಚನೆ: ಶ್ರೀಮತಿ ಪುಷ್ಪ ವೆಂಕಟೇಶ್

ಜೀವಂತಿಕೆಯ ನಗರ – ಬ್ಯಾಂಗ್ಕಾಕ್

ಲೇಖಕರು:
ನಾಗಶ್ರೇಲ ಕುಮಾರ್

ಮುಂದುವರಿದ ಭಾಗ ...

ನನ್ನ ಕಾಲುಗಳು ಪದ ಹಾಡುತ್ತಿದ್ದರೂ, ಹೊಟ್ಟೆ ಚುರುಗುಡುತ್ತಿದ್ದರೂ, ಸುತ್ತುವುದನ್ನು ಮಾತ್ರ ನಿಲ್ಲಿಸುತ್ತಿರಲಿಲ್ಲ. ತಿನ್ನಲು ಏನೂ ಸಿಗದಿದ್ದರೂ, ಯಾವುದೋ ಒಂದು ಹಣ್ಣೋ, ಹಣ್ಣಿನ ರಸವನ್ನೋ ಕುಡಿದುಕೊಂಡು ಮತ್ತೆ ನಡೆಯಲು ಸಿದ್ಧ. ಅದರಲ್ಲೂ ಶಾಪಿಂಗ್ ಪ್ರಿಯರ ಸ್ವರ್ಗವೆನಿಸಿಕೊಂಡ ಬ್ಯಾಂಗ್ಕಾಕ್ ಎಂದರೆ ಕೇಳಬೇಕೇ? ಜೊತೆಗೆ ನಮ್ಮದೇ ನಾಡಿನಲ್ಲಿರುವಂತಹ ಭಾವನೆ ಮೂಡಿಸುವ ದೇವರುಗಳು ಬೇರೆ.....,

ಮಾಲಾಷ್ಟೋತ್ತರ ಶತನಾಮಾವಳೀ:

ಇದೇನೋ ಅಷ್ಟೋತ್ತರ ಪೂಜೆ ಎಂದುಕೊಳ್ಳಬೇಡಿ, ಇದು ಬ್ಯಾಂಗ್ಕಾಕ್ ನಲ್ಲಿರುವ ಮಾಲುಗಳ ಅಂದರೆ ವ್ಯಾಪಾರೀ ಮಳಿಗೆಗಳ ಬಗ್ಗೆ ನಾನು ಹೇಳ ಹೊರಟಿರುವುದು. ಬರೀ ಅಷ್ಟೋತ್ತರವೇ ಏನು, ಸಹಸ್ರನಾಮ ಕೂಡ ಹೇಳಬಹುದಾದಷ್ಟು ಮಳಿಗೆಗಳಿವೆ ಅಲ್ಲಿ. ಬ್ಯಾಂಗ್ಕಾಕ್ ನ ಸಿಯಾಮ್ ಪ್ರದೇಶದಲ್ಲಿ ಎತ್ತ ತಿರುಗಿದರೂ ಭವ್ಯ ಶಾಪಿಂಗ್ ಮಾಲ್ ಗಳೇ. ಪ್ರಪಂಚದ ಆರನೆಯ ಅತಿ ದೊಡ್ಡದಾದ ಸೆಂಟ್ರಲ್ ವರ್ಲ್ಡ್, ಅತ್ಯಾಧುನಿಕ ಫ್ಯಾಷನ್ ಉಡುಪುಗಳು, ಜಗತ್ತಿನ ಎಲ್ಲ ಬ್ರ್ಯಾಂಡ್ ಗಳಿಂದ ಯುವ ಪೀಳಿಗೆಯನ್ನು ಆಕರ್ಷಿಸುವ ಸಿಯಾಮ್ ಪ್ಯಾರಗಾನ್, ಗೇಸೋರ್ನ್ ಪ್ಲಾಜಾ, ಅಮಾರಿ ಪ್ಲಾಜಾ, ಸಿಯಾಮ್ ಡಿಸ್ಕವರಿ, ಟರ್ಮಿನಲ್21, ಸೆಂಟ್ರಲ್ ಎಂಬೆಸಿ, ಎಂ ಕ್ವಾರ್ಟಿಯರ್, ಹೀಗೆ ಹತ್ತಾರು ದುಬಾರಿ ಬ್ರ್ಯಾಂಡುಗಳ ಮಾಲುಗಳೇ ಒಂದೆಡೆಯಾದರೆ, ಅವುಗಳ ನಡುವೆ ಎಂ ಬಿ ಕೆ ಮಾಲ್, ಸ್ವಲ್ಪ ಮುಂದೆ ಹೋದರೆ ಪ್ಲಾಟಿನಮ್ ಪ್ಲಾಟಿನಮ್ ಪ್ಲಾಜ, ಪಕ್ಕದಲ್ಲೇ ಪ್ಯಾಂಟಿಪ್ ಪ್ಲಾಜಾ, ಎದುರಿಗೇ ಪ್ರಥುನಾಮ್ ಮಾರ್ಕೆಟ್, ಜೊತೆಗೇ ಇಂದ್ರ ಮಾರ್ಕೆಟ್, ಮುಂತಾದ ಮಧ್ಯಮ ವರ್ಗದ ಬ್ರ್ಯಾಂಡುಗಳು, ನಕಲಿ ಬ್ರ್ಯಾಂಡುಗಳ ಉಡುಪು, ವಸ್ತುಗಳ ಮಾರುವ ಮಾಲ್ ಗಳೂ ಹೇರಳವಾಗಿದೆ.

ಎಂ ಬಿ ಕೆ ಮಾರ್ಕೆಟ್ ಅತ್ಯಂತ ಜನಪ್ರಿಯ ಸ್ಥಳವಾಗಿದ್ದು, ಕಡಿಮೆ ಬೆಲೆ, ವೈವಿಧ್ಯತೆ, ಚೌಕಾಸಿ ವ್ಯಾಪಾರ, ಒಂದೇ ಸೂರಿನಡಿ ಸಕಲ ವಸ್ತುಗಳ ದೊರಕುವಿಕೆಯಿಂದಾಗಿ ಮಧ್ಯಮವರ್ಗದ ಪ್ರವಾಸಿಗರನ್ನು ಆಯಸ್ಕಾಂತದಂತೆ ಸೆಳೆಯುತ್ತದೆ ಏಳು ಮಹಡಿಗಳ ಈ ಮಾಲ್ ನಲ್ಲಿ ಒಂದೊಂದು ಮಹಡಿಯೂ ಒಂದೊಂದು, ರೀತಿಯ ವಸ್ತುಗಳಿಗೆ ಮೀಸಲಾಗಿದೆ. ಬಟ್ಟೆಗಳು, ವಾಚು, ಆಭರಣ, ಬ್ಯಾಗ್, ಕ್ಯಾಮರಾ, ಮೋಬೈಲ್ ಫೋನ್, ಗೃಹಾಲಂಕಾರ ವಸ್ತುಗಳು, ಕರಕುಶಲ ಸಾಮಗ್ರಿಗಳು, ಹೀಗೆ ಇಲ್ಲಿ ಸಿಗುವುದಿಲ್ಲ ಎನ್ನುವಂತಹ ವಸ್ತುಗಳಿಲ್ಲ ಇಲ್ಲಿ.

ಹೆಂಗಸರು, ಮಕ್ಕಳು, ಗಂಡಸರು ಎಲ್ಲರ ಬಟ್ಟೆಗಳ ಬಯಕೆಯನ್ನು ಈಡೇರಿಸುವ ಸ್ಥಳ ಪ್ಲಾಟಿನಮ್ ಫ಼ಯಾಷನ್ ಮಾಲ್. ಆರು ಮಹಡಿಗಳ ಪೂರ್ತ ಬರೀ ಬಟ್ಟೆ ಅಂಗಡಿಗಳೇ. ಸುಮ್ಮರು ೧೩೦೦ ಅಂಗಡಿಗಳು!! ಹೋಲ್ಸೇಲ್ ವ್ಯಾಪಾರ ಮಾಡಿದರ ಇಲ್ಲಿ ಬಲು ಅಗ್ಗ. ಪ್ಲಾಟಿನಮ್ ಪ್ಲಾಝಾದ ಬದಿಗಿರುವ ಪ್ಯಾಂಟಿಪ್ ಮಾಲ್ ಅತಾಧುನಿಕ ಎಲೆಕ್ಟ್ರಾನಿಕ್ ಉಪಕರಣಗಳ ಬೃಹತ್ ಮಳಿಗೆ. ದುಬಾರಿ ಬೆಲೆಯ ಅಸಲಿ ಉಪಕರಣಗಳಿಂದ ಹಿಡಿದು, ಅದೇ ಉಪಕರಣಗಳು ಅಚ್ಚರಿ ಮೂಡುವಷ್ಟು ಕಡಿಮೆ ಬೆಲೆಯಲ್ಲಿ, ನಕಲಿನ ರೂಪದಲ್ಲಿ ದೊರಕುವ ಜಾಗ ಇದು.

ಮಹಾಭಾರತದ ಚಕ್ರವ್ಯೂಹದ ಬಗ್ಗೆ ಎಲ್ಲರೂ ಕೇಳಿದ್ದೇವಷ್ಟೆ. ಬ್ಯಾಂಗ್ಕಾಕ್ನಲ್ಲಿ ಸ್ವತಃ ನಾವೇ ಅದರ ಒಳ ಹೋಗಬಹುದು, ಕಳೆದೂಹೋಗಬಹುದು. ಆದರೆ ಇದು ಚಕ್ರವ್ಯೂಹವಲ್ಲ, ಚಾಟುಚಕ್ ಮಾರುಕಟ್ಟೆ. ಪ್ರಪಂಚದ ಅತಿ ದೊಡ್ಡ ತೆರೆದ ಮಾರುಕಟ್ಟೆ ಎಂಬ ಖ್ಯಾತಿ ಪಡೆದಿರುವ ಈ ಮಾರುಕಟ್ಟೆಯಲ್ಲಿ ಒಮ್ಮೆ ನೋಡಿದ ಜಾಗಕ್ಕೆ ಮತ್ತೊಮ್ಮೆ ಹೋಗಬೇಕೆಂದರೆ ಪರದಾಡಲೇ ಬೇಕು. ಚಾಟುಚಕ್ ಮಾರುಕಟ್ಟೆಯಲ್ಲಿ ಗೃಹಾಲಂಕಾರ, ಕರಕುಶಲ ಮತ್ತು ಚಿತ್ರಕಲೆಯು ವಿಶೇಷವಾಗಿ ಗಮನ ಸೆಳೆಯುತ್ತದೆ. ಅಲ್ಲೇ ಕುಳಿತು ಚಿತ್ರಗಳನ್ನು ಬಿಡಿಸಿ ಮಾರಾಟಮಾಡುವ ಪ್ರತಿಭಾವಂತ ಕಲಾವಿದರನ್ನೂ ಕಾಣಬಹುದು. ವೈವಿಧ್ಯಮಯವಾದ ವಸ್ತುಗಳು ಅತಿ ಕಡಿಮೆ ಬೆಲೆಯಲ್ಲಿ ಸಿಗುತ್ತದೆ ಎಂಬ ಮಾತಿದ್ದರೂ, ನನಗೇನೋ ಎಂ ಬಿ ಕೆ ಮಾಲ್ ಇದಕ್ಕಿಂತಲೂ ವಾಸಿ ಎನ್ನಿಸಿತು.

ಮುಂದಿನ ಪುಟ ನೋಡಿ ...

ಕಡೆಗೆ, ನೀವು ಕೊಂಡ ವಸ್ತುಗಳ ಮೂಟೆಯನ್ನೂ ಹೊತ್ತು ನಿಮ್ಮ ಪ್ರವಾಸ ಮುಂದುವರೆಸಬೇಕಾಗಿಲ್ಲ. ಆಗಲೇ ಅಲ್ಲಿಂದಲೇ ನಿಮ್ಮ ಊರಿಗೆ, ಮನೆಗೆ ಪ್ಯಾಕ್ ಮಾಡಿಕಳಿಸಲು ನಿಮ್ಮ ಸೇವೆಗೆ ಡಿ ಹೆಚ್ ಎಲ್ ಮುಂತಾದ ಕಾರ್ಗೋ ಸರ್ವೀಸ್ ಗಳು ಕೂಡ ಅಲ್ಲಿ ಲಭ್ಯ. ಎಲ್ಲಾ ಮುಗಿಯಿತು ಹೊರಗೆ ಹೋಗೋಣವೆಂದು ದಾರಿ ಹುಡುಕಿ ನೀವು ಹೊರಬರುವಷ್ಟರಲ್ಲಿ ಮತ್ತೊಂದಷ್ಟು ಬೇಡದ್ದನ್ನು ಕೊಂಡಿರುತ್ತೀರ. ಮಾರುಕಟ್ಟೆಯಿಂದ ಹೊರಬರಲು ಮತ್ತೊಮ್ಮೆ ಪರದಾಡಿಕೊಂಡು ದಾರಿ ಹುಡುಕಬೇಕು.

ಬ್ಯಾಂಗ್ಕಾಕ್ ನಲ್ಲಿ ಮಳಿಗೆಗಳಷ್ಟೇ ಜನಪ್ರಿಯ ಬೀದಿ ಹಾಗೂ ರಾತ್ರಿ ಮಾರುಕಟ್ಟೆಗಳು. ಸಾಧಾರಣ ನಾವುಗಳು ನೋಡುವಂತೆ, ಸಿಡ್ನಿಯಲ್ಲಿ ಸಂಜೆ 5 ರ ಮೇಲೆ ಅಂಗಡಿಗಳು ತೆರೆದಿರುವುದೇ ಕಮ್ಮಿ, ಬೆಂಗಳೂರಿನಲ್ಲಿ ರಾತ್ರಿ ಒಂಬತ್ತರವರೆವಿಗೂ ವ್ಯಾಪಾರ ನಡೆಯುತ್ತಿರುತ್ತದೆ. ರಾತ್ರಿ ಹತ್ತು ಗಂಟೆಗೆ, ಊಹ್ಞೂ...ಎಲ್ಲರೂ ಮನೆಯಲ್ಲಿ....ರಾತ್ರಿ ಹತ್ತು ಗಂಟೆಯ ಮೇಲೆ ಅಂಗಡಿಗಳನ್ನು ಹೂಡಿ ವ್ಯಾಪಾರ ಆರಂಭಿಸುವುದ ಕೇಳಿದ್ದೀರಾ? ಅದೂ ದೊಡ್ಡ ರಸ್ತೆಗಳ ಉದ್ದಕ್ಕೂ ಅಂಗಡಿಗಳ ಸಾಲು. ವ್ಯಾಪಾರವೂ ಕೂಡ ಜೋರು. ಹೆಚ್ಚಾಗಿ ಪ್ರವಾಸಿಗರೇ ಇರುವ ಈ ಅಂಗಡಿಗಳಲ್ಲಿ ಅಸಲಿ, ನಕಲಿ ಎಲ್ಲವೂ ಲಭ್ಯ. ಜೊತೆಗೆ ಅಷ್ಟೇ ಜೋರಿನಿಂದ ವ್ಯಾಪಾರ ನಡೆಸುವ ರಸ್ತೆ ಬದಿಯ ಹೋಟಲ್ಗಳಂತೂ ಕಿಕ್ಕಿರಿದು ತುಂಬಿರುತ್ತವೆ. ಇದುವೇ ಜೀವಂತಿಕೆಯ ನಗರವೆಂದು ಕರೆದುಕೊಳ್ಳುವ ಬ್ಯಾಂಗ್ಕಾಕ್ ನ ವೈಶಿಷ್ಟ್ಯ. ನಗರದ ತುಂಬಾ ಅಲ್ಲಲ್ಲಿ ತೆರೆದುಕೊಳ್ಳುವ ಹತ್ತಾರು ರಾತ್ರಿ ಮಾರುಕಟ್ಟೆಗಳು ಶಾಪಿಂಗ್ ಪ್ರಿಯರ ನಿದ್ದೆಗೆಡಿಸಿ, ಜೋಬಿಗೆ ಕನ್ನ ಹಾಕಿದರೂ, ಮನಸ್ಸಿಗೆ ಸಮಾಧಾನ ತರುವಂತೆ ಸಾಮಗ್ರಿಗಳನ್ನು ಒದಗಿಸುವುದಂತೂ ಖಂಡಿತ.

ಕೈಮುಗಿದು ಒಳಗೆ ಹೋಗಿ:-

ಹೌದು, ನೀವು ಶಾಪಿಂಗ್ ಮಾಲ್ಗಳ ಒಳಗೆ ಹೋಗುವಾಗ ಬಹುಶಃ ಕೈಮುಗಿದೇ ಒಳಗೆ ಹೋಗಿರುತ್ತೀರ. "ಇಲ್ಲಿನ ಬೆಲೆಗಳನ್ನು ನೋಡಿ ನಾನು ಮೂರ್ಛೆ ಹೋಗದಂತೆ ಕಾಪಾಡು ದೇವರೇ!!" ಎಂದೇನಲ್ಲ.

ಬ್ಯಾಂಗ್ಕಾಕ್ ನಲ್ಲಿ ಮಾರಿಗೊಂದಲ್ಲದಿದ್ದರೂ ಮನೆಗೊಂದು ಅಥವಾ ಮಾಲ್ ಗೆ ಒಂದು ದೇವರಿರುವುದಂತೂ ಖಂಡಿತ. ಅದೇನೋ ಸರಿ ಆದರೆ ಥೈಲ್ಯಾಂಡ್ ದೇವರಿಗೆ ನಾನೇಕೆ ನಮಸ್ಕಾರ ಹಾಕಲಿ ಎನ್ನಬೇಡಿ. ಏಕೆಂದರೆ ಅಲ್ಲಿರುವ ದೇವರುಗಳು, ಗಣೇಶ, ಬ್ರಹ್ಮ, ವಿಷ್ಣು, ಲಕ್ಷ್ಮಿ ಇತ್ಯಾದಿ ನಮ್ಮ ದೇವರುಗಳೇ.

ನಾನು ಚಿತ್ಲೋಮ್ ಸ್ಟೇಷನ್ ನಲ್ಲಿ ಇಳಿದು ಸುತ್ತಮುತ್ತಲೂ ಇರುವ ತಾಣಗಳಿಗೆ ಭೇಟಿ ಕೊಡೋಣವೆಂದು ಪಾದಚಾರಿ ಮೇಲ್ಸೇತುವೆಯ ಮೇಲೆ ಬರುತ್ತಿದ್ದೆ. ಕೆಳಗೆ ನಗರದ ನಾಲ್ಕು ಪ್ರಮುಖ ರಸ್ತೆಗಳು ಕೂಡುವ ಜಾಗದಲ್ಲಿ, ಒಂದು ಭವ್ಯ ಹೋಟಲ್ ಮುಂದೆ ಒಂದು ಮಂಟಪದಲ್ಲಿ ದೇವರಮೂರ್ತಿಗೆ ಪೂಜೆ ನಡೆಯುತ್ತಿತ್ತು. ನಮ್ಮ ಊರಿನ ಹಾಗೇ ನೂರಾರು ಭಕ್ತರು. ಕೈಯ್ಯಲ್ಲಿ ಹೂವು ಹಣ್ಣುಗಳ ಬುಟ್ಟಿಗಳು. ಚೆಂಡು ಹೂವು, ಹಣ್ಣುಗಳು, ಗಂಧದ ಕಡ್ಡಿಗಳು ತುಂಬಿದ ಆ ಬುಟ್ಟಿಯನ್ನು ದೇವರಿಗೆ ಅರ್ಪಿಸಿ, ಪ್ರದಕ್ಷಿಣೆ ಬಂದು, ಹಲವಾರು ರೀತಿಯಲ್ಲಿ ನಮಸ್ಕಾರ ಹಾಕುತ್ತಿದ್ದರು. ಕುತೂಹಲಗೊಂಡು ಕೆಳಗಿಳಿದು ಹೋದೆ. ನಾಲ್ಕು ತಲೆಗಳ ದೇವರಮೂರ್ತಿಯನ್ನು ಕಂಡು ಇದ್ಯಾವ ದೇವರಿರಬಹುದು ಎಂದು ವಿಚಾರಿಸಿದರೆ, ಎರಾವನ್/ ಇರಾವನ್ ಎಂದು ತಿಳಿಯಿತು. ನನಗೇನೋ ಮೊದಲ ಬಾರಿಗೆ ಬ್ರಹ್ಮನನ್ನು ಕಂಡಂತೆ ಸಂತೋಷವಾಯಿತು. ರಸ್ತೆ ಬದಿಯಲ್ಲಿ ಹೂವು ಹಣ್ಣಿನ ವ್ಯಾಪಾರಿಗಳು, ಗಂಟೆ ನಗಾರಿಗಳ ಸದ್ದು, ಸುಶ್ರಾವ್ಯವಾದ ಥೈ ಸಂಗೀತ, ಕಾಣಿಕೆ ಹುಂಡಿ, ದೇವರಿಗೆ ಅರ್ಪಿಸಲು ಆನೆಗಳ ವಿವಿಧ ಆಕಾರದ ಬೊಂಬೆಗಳು, ಕಪ್ಪು ಬಣ್ಣದ ಸಫಾರಿ ತರದ ಶರ್ಟ್ ಪ್ಯಾಂಟು ಧರಿಸಿ ಭಕ್ತರು ನೀಡುತ್ತಿದ್ದ ಹೂವು ಹಣ್ಣುಗಳನ್ನು ದೇವರ ಮುಂದಿಡುತ್ತಿದ್ದ ನಾಲ್ಕಾರು ಜನರು, ಎಲ್ಲವನ್ನು ಬೆರಗಿನಿಂದ ನೋಡುತ್ತಾ ನಿಂತೆ. ಅತೀವವಾದ ಜನದಟ್ಟಣೆಯ ಪ್ರದೇಶದಲ್ಲಿದ್ದ ಆ ತೆರೆದ ದೇಗುಲಕ್ಕೆ ಜನಪ್ರವಾಹ ಹರಿದು ಬರುತ್ತಿತ್ತು. ಬದಿಯಲ್ಲಿದ್ದ ಮತ್ತೊಂದು ಮಂಟಪದಲ್ಲಿ ಹತ್ತಾರು ಮಂದಿ ನರ್ತಕಿಯರು ಕುಳಿತಿದ್ದರು. ಭಕ್ತರು ದೇವರಿಗೆ ಸಂಗೀತ ನೃತ್ಯ ಸೇವೆ ಸಲ್ಲಿಸುವುದಿದ್ದರೆ, ಆ ನರ್ತಕಿಯರಿಗೆ ಹಣ ನೀಡಿದರೆ, ಅವರು ಸಂಗೀತವನ್ನು ಹಾಕಿಕೊಂಡು ದೇವರಿಗೆದುರಾಗಿ ನರ್ತಿಸುತ್ತಿದ್ದರು.

ಮುಂದಿನ ಪುಟ ನೋಡಿ ...

ನಾನೂ ಆ ದೇವರಿಗೆ ನಮಸ್ಕರಿಸಿ ಅಲ್ಲಿಂದ ಹೊರಟೆ. ರೂಮಿಗೆ ಬಂದ ನಂತರ ಅಂತರ್ಜಾಲದಲ್ಲಿ ಹುಡುಕಾಡಿ ಅಲ್ಲಿನ ವಿವರಗಳನ್ನು ತಿಳಿದುಕೊಂಡೆ. ಅದು "ಥಾವೋ ಮಹಾ ಫ್ರೋಮ್" ಎಂದು ಕರೆಯುವ ದೇವರು, ಅಂದರೆ ನಮ್ಮ 'ಪರ ಬ್ರಹ್ಮ'. ಶುಭವನ್ನು ತರುವ, ಅನಿಷ್ಟಗಳನ್ನು ದೂರ ಮಾಡುವ ದೇವರು. ಏನೇ ಇರಲಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಭಕ್ತರು ಮೊರೆ ಹೋಗುವ ದೇವರು ಈ ಬ್ರಹ್ಮ, ಅದಕ್ಕೇ ಅಲ್ಲಿ ಸದಾ ಜನಜಂಗುಳಿ.

ಆ ನಂತರ ಎಲ್ಲೆಡೆ ಸುತ್ತುವಾಗ ಗಮನಕ್ಕೆ ಬರಲಾರಂಭಿಸಿದವು .ನಗರದ ಎಲ್ಲ ಮಳಿಗೆಗಳ ಮುಂದೂ ಇರುತ್ತಿದ್ದ ದೇವರುಗಳು , ಸೆಂಟ್ರಲ್ ವರ್ಲ್ಡ್ ಹತ್ತಿರ ತ್ರಿಮೂರ್ತಿಗೇಸೋರ್ನ್ ಪ್ಲಾಜಾದ ,ಅಮಾರಿನ್ ಪ್ಲಾಜ಼ ಮುಂದೆ ಇಂದ್ರನ ಮೂರ್ತಿ ,ಹಾಗೂ ಗಣೇಶನ ಮೂರ್ತಿಗಳು , ವಿಶೇಷವೇನು ಗೊತ್ತೆ ಇಲ್ಲಿ ಬರುವ ಭಕ್ತರು ,ಇಂಟರ್ ಕಾಂಟಿನೆಂಟಲ್ ಹೋಟಲ್ ಮುಂದೆ ಗರುಡನನ್ನೇರಿರುವ ವಿಷ್ಣು ,ಒಳಗೆ ಲಕ್ಷ್ಮಿಯ ಮೂರ್ತಿ ಬಹುಪಾಲು ಬೌದ ,ಎಲ್ಲರೂ ಈ ದೇಶದ ಜನ ,ಹಿಂದೂಗಳಾಗಲೀ ಅಲ್ಲ ,ಯಾರೂ ಭಾರತೀಯರಾಗಲೀ್ಧ ಧರ್ಮೀಯರು.
ಹೀಗೆ ಶಾಪಿಂಗ್ ಮಾಲ್ ಗಳ ಮುಂದಷ್ಟೇ ಅಲ್ಲಬಹುಶಃ ಇಲ್ಲಿ .ಮನೆಗಳ ಮುಂದೂ ಮಂಟಪಗಳಲ್ಲಿ ದೇವರ ವಿಗ್ರಹಗಳು ,ಸಣ್ಣಸಣ್ಣ ಅಂಗಡಿಗಳು , ಅಂಗಡಿಗಳಲ್ಲೂ ಅಷ್ಟೇ ಮುದ್ದಾದ .ಮನೆಗಳ ಮುಂದೆ ಇರುವಷ್ಟು ಗಣೇಶನ ವಿಗ್ರಹಗಳು ಬಹುಶಃ ನಮ್ಮ ಊರಿನಲ್ಲೂ ಕಾಣಲಾರದು ,ಅಂಗಡಿ ದುರ ,ಶಿವಪಾರ್ವತಿ ,ಸರಸ್ವತಿ ,ಲಕ್ಷಿ ,ಗಣೇಶ್ಗೆ ,ನಿಜ ಹೇಳಬೇಕೆಂದರೆ .ಹೀಗೆ ಎಲ್ಲ ದೇವರ ವಿಗ್ರಹಗಳೂ ಮಾರಾಟಕ್ಕೆ ಇರುತ್ತವೆ ,ಬ್ರಹ್ಮ , ಈ ಸಲ ನಾನೊಂದು ಚಾಮುಂಡೇಶ್ವರಿಯ .ಲಕ್ಷಣವಾಗಿಯೂ ಇರುತ್ತವೆ ,ನಮ್ಮ ಊರಿನಲ್ಲಿ ಸಿಗುವ ಮೂರ್ತಿಗಳಿಗಿಂತಲೂ ಇವು ಮುದ್ದಾಗಿ .ಮೂರ್ತಿಯನ್ನು ಕೊಂಡು ತಂದೆ

ಹೀಗೇಕೆ ಬೌದ್ಧರ ನಾಡಿನಲ್ಲಿ ಹಿಂದೂ ದೇವತೆಗಳಿಗೆ ಪೂಜೆ?

ಥೈಲ್ಯಾಂಡ್ ಪ್ರಮುಖವಾಗಿ ಬೌದ್ಧ ಧರ್ಮ ಅನುಯಾಯಿಗಳ ರಾಷ್ಟ್ರ೦ ಶೇಕಡಾ ,ರಷ್ಟು ಬೌದ್ಧರೇ ಇದ್ದರೆ ೯೫ ಹತ್ತಿರ ಶೇಕಡಾ ..೧ ರಷ್ಟು ಕೂಡ ಹಿಂದೂ ಧರ್ಮೀಯರಿಲ್ಲ .ಆದರೆ ಭಾರತದಿಂದಲೇ ಬಂದಿರುವ ಬೌದ್ಧ ಧರ್ಮದ ಪ್ರಭಾವ ಇಲ್ಲಿ ಗಾಢವಾಗಿದೆ .
ಅಲ್ಲದೆ ಕ್ರಿ.ಶ.1300 ರವರೆಗೆ ಇಲ್ಲಿ ಆಳಿದ ಖ್ಮೇರ್ ರಾಜವಂಶ ಹಿಂದೂ ಧರ್ಮಾನುಯಾಯಿಗಳಾಗಿದ್ದು, ಥೈಲ್ಯಾಂಡ್ ನ ಪೂಜೆ, ವಿಧಿವಿಧಾನಗಳಲ್ಲಿ ಸಂಸ್ಕೃತ, ಮತ್ತು ಹಿಂದೂ ದೇವತೆಗಳ ಪ್ರಭಾವ ಇಂದಿಗೂ ಉಳಿದುಕೊಂಡು ಬಂದಿದೆಈ ದೇಶದ ಜನತೆ ಮೂಲವಾಗಿ ಚೀನಾದೇಶದ . ವಂಶೀಯರಾಗಿ, ಬುದ್ಧನ ಧರ್ಮವನ್ನು ಪಾಲಿಸಿದರೂ ಅವರು ಮೊರೆ ಹೋಗುವುದು ಮಾತ್ರ ಹಿಂದೂ ದೇವತೆಗಳಿಗೆಏಕೆಂದರೆ ಅವರ ಧರ್ಮದಲ್ಲಿ . ನಮ್ಮ ದೇವತೆಗಳ ಹಾಗೆ ಶಕ್ತಿಶಾಲಿ ದೇವತೆಗಳಿಲ್ಲ. ಹಾಗಾಗಿಯೇ ಮನೆಮನೆಗಳ ಮುಂದೆ ಸುಂದರವಾದ ಮಂಟಪಗಳಲ್ಲಿ ಹಿಂದೂ ದೇವತೆಗಳನ್ನಿರಿಸಿ.ಪೂಜೆ ಸಲ್ಲಿಸುವುದನ್ನು ಕಾಣಬಹುದು ,



ರಾಮಾಯಣವಂತೂಎಂಬ 'ರಾಮಕಿಯೆನ್' ಹೆಸರಿನಿಂದ ಇವರ ಮೆಚ್ಚಿನ ಕಾವ್ಯಮತ್ತು ಅತಿ ಹೆಚ್ಚು , .ಪ್ರದರ್ಶನಗೊಳ್ಳುವ ನೃತ್ಯರೂಪಕ ರಾಜನನ್ನು ರಾಮನ ಅವತಾರವೆಂದೂ ಭಾವಿಸುತ್ತಾರೆರಾ .ಜನ ಆಸ್ಥಾನ ಪುರೋಹಿತರು ಬ್ರಾಹ್ಮಣರಾಗಿದ್ದು, ಹಿಂದೂ ಪದ್ದತಿಯಲ್ಲಿಯೇ ಅರಮನೆಯಲ್ಲಿ ಪಟ್ಟಾಭಿಷೇಕ, ಮುಂತಾದ ಕಾರ್ಯಗಳನ್ನು ನೆರವೇರಿಸುತ್ತಾರೆಂದು ಹೇಳುತ್ತಾರೆ.

ಥೈಲ್ಯಾಂಡ್ ನಲ್ಲಿ ಎಲ್ಲೆಡೆಯಲ್ಲಿಯೂ ನಾವು ಕಾಣುವ ಸಿಯಾಮ್ ಎಂಬ ಹೆಸರಿನ ಮೂಲ ಶ್ಯಾಮ(ದೇಶ), ಆಯುತ್ತಾಯ ಎಂಬ ನಗರದ ಹೆಸರಿನ ಮೂಲ ಅಯೋಧ್ಯಹೀಗೆ , ಇಲ್ಲಿನ ಅನೇಕ ಹೆಸರುಗಳನ್ನುಸೂಕ್ಷ್ಮವಾಗಿ ಅವಲೋಕಿಸಿದಾಗ ಸಂಸ್ಕೃತದಭಾರತದ , ಛಾಯೆಯನ್ನು ಕಾಣಬಹುದುಆದರೆ . ಸಾವಿರಾರು ವರ್ಷಗಳ ಹಿಂದೆ ಇಲ್ಲಿಗೆ ಬಂದ ಪೌರಾಣಿಕ ಕಥೆಗಳು ಕಾಲಕ್ರಮೇಣ ಪ್ರಾದೇಶಿಕ ಪರಿಸರಗಳಿಗನುಗುಣವಾಗಿ ವ್ಯತ್ಯಯ ಹೊಂದಿದ್ದು, ಇಂದು ನಾವಲ್ಲಿ ಕಂಡು ಕೇಳುವ ಕಥೆಗಳಲ್ಲಿ ಆ ಬದಲಾವಣೆ ಕಾಣಬಹುದು .

ಒಟ್ಟಿನಲ್ಲಿ ನಾನು ಬ್ಯಾಂಗ್ಕಾಕ್ ನಲ್ಲಿಆ ,ಭಾರತೀಯರಿಗೂ ,ಸ್ಥಳೀಯ ಜನತೆಯಿಂದ ಪೂಜೆಗೊಳ್ಳುವ ಹಿಂದೂ ದೇವರುಗಳನ್ನು ಕಂಡಾಗ , .ಆತ್ಮೀಯ ಭಾವ ಮೂಡಿತು ,ದೇಶದವರಿಗೂ ಬಲವಾದ ನಂಟಿರುವಂತೆ ▪

ಬ್ಯಾಂಗ್ಕಾಕ್ ನ ಮತ್ತಷ್ಟು ಥಾಯಾ ಚಿತ್ರಗಳು

ನೀವು ಮಾಡಿ

ಚಳಿಗಾಲಕ್ಕೆ ಯಾವ ಬಟ್ಟೆ ಸೂಕ್ತ!

ಸಂಗ್ರಹ: ಬದರಿ ತ್ಯಾಮಗೊಂಡ್ಲು

ಕೊರೆಯುವ ಚಳಿಗಾಲಕ್ಕೆ ಯಾವ ಬಟ್ಟೆ ಸೂಕ್ತ ಎಂದು ತಿಳಿದುಕೊಳ್ಳಲು ಈ ಪ್ರಯೋಗ ಮಾಡೋಣ.

ಬೇಕಾಗುವ ಸಾಮಗ್ರಿ:

4 ಲೋಟದಲ್ಲಿ (ಗಾಜು) ಸುಮಾರು 37 ಡಿಗ್ರಿ ಉಷ್ಣಾಂಶವಿರುವ ನೀರು (ಆರೋಗ್ಯವಂತ ಮನುಷ್ಯನ ತಾಪಮಾನ ಸುಮಾರು 37 ಡಿಗ್ರಿ)

4 ತರಹದ ಬಟ್ಟೆ ತುಂಡುಗಳು (ಉಣ್ಣೆ (wool), ಹತ್ತಿ, ನೈಲಾನ್, ಜಾಳಾದ ಬಟ್ಟೆ - ಬಟ್ಟೆಯ ತುಂಡು ಲೋಟ ಸುತ್ತುವಷ್ಟಿರಬೇಕು)

ಒಂದು ಥರ್ಮಾಮೀಟರ್

ವಿಧಾನ:

ಉಷ್ಣ ನೀರಿರುವ ಪ್ರತಿಯೊಂದು ಲೋಟಕ್ಕೂ ಒಂದೊಂದು ತರಹದ ಬಟ್ಟೆ ತುಂಡುಗಳನ್ನು ಸುತ್ತಿರಿ

ಸುಮಾರು 15-20 ನಿಮಿಷ ಸುಮ್ಮನೆ ಇರಲು ಬಿಡಿ

ನಂತರ ಪ್ರತಿಯೊಂದರ ಲೋಟದಲ್ಲಿ ಥರ್ಮಾಮೀಟರ್ ಇರಿಸುತ್ತ ತಾಪಮಾನ ಎಷ್ಟಿದೆಯೆಂದು ನೋಡಿ

ಏನಾಗುತ್ತದೆ:

ಉಣ್ಣೆಯಿಂದ ಆವೃತವಾದ ಲೋಟದ ನೀರಿನ ತಾಪಮಾನ ಮಿಕ್ಕೆಲ್ಲವುದಕ್ಕಿಂತ ಹೆಚ್ಚಿರುತ್ತದೆ. ಏಕೆಂದರೆ ಉಣ್ಣೆಯ ಎಳೆಗಳು ಹೆಚ್ಚು ಒತ್ತೊತ್ತಾಗಿ ಹೆಣೆಯಲ್ಪಟ್ಟಿರುತ್ತದೆ. ಉಷ್ಣತೆಯು ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕೆ ಜಾಗವೇ ಇರುವುದಿಲ್ಲ. ಹೀಗಾಗಿ ಲೋಟದ ನೀರಿನಲ್ಲಿನ ಉಷ್ಣತೆಯನ್ನು ಹಾಗೆ ಹಿಡಿದಿಟ್ಟುಕೊಂಡಿರಲು ಸಾಧ್ಯವಾಗುತ್ತದೆ.

ಇದೇ ನಿಯಮದಡಿ, ನಾವುಗಳು ಉಣ್ಣೆಯಿಂದ (wool) ಮಾಡಿದ ಬಟ್ಟೆಗಳನ್ನು ಹಾಕಿಕೊಂಡಾಗ, ಅದು ನಮ್ಮ ದೇಹದ ಉಷ್ಣತೆಯು ಆಚೆ ಹೋಗದಂತೆ ತಪ್ಪಿಸುವುದರಿಂದ ದೇಹದ ಶಾಖವು ಕಡಿಮೆ ಆಗುವುದು ತಪ್ಪುತ್ತದೆ. ಹೀಗಾಗಿ ಚಳಿಗಾಲದಲ್ಲಿ ಉಣ್ಣೆಯಿಂದ ಮಾಡಿದ ಬಟ್ಟೆ ಅಥವಾ ಸುಲಭವಾಗಿ ಉಷ್ಣತೆಯು ಹರಿದುಹೋಗದಂತಹ ಬಟ್ಟೆಗಳನ್ನು ಧರಿಸಿದರೆ, ಚಳಿಯಿಂದ ಸಂರಕ್ಷಿಸಿಕೊಳ್ಳಬಹುದು. ಇಂತಹ ಬಟ್ಟೆಗಳಿಲ್ಲದಿದ್ದರೂ, ಸುಮಾರಾಗಿ ಉಷ್ಣಾಂಶ ಹಿಡಿದಿಟ್ಟುಕೊಳ್ಳುವ ಬಟ್ಟೆಗಳನ್ನು ಎರಡು ಮೂರು ಪದರ ಕೂಡ ಧರಿಸಬಹುದು.▪

ಜಾಣ ಕರ್ನಾಟಕ – ಉತ್ತರ

೧. ನಟಿ ಪದ್ಮಾ ಕುಮುಟ, ಚಿತ್ರ ಜೋಮನ ದುಡಿ.

೨. ಚಿತ್ರ ಬೆಟ್ಟದ ಜೀವ, ಲೇಖಕರು ಶಿವರಾಮ ಕಾರಂತ.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಕರ್ನಾಟಕ ವೈಭವ

1ST OF APRIL 2017

TIME : 6.30pm gather for 7.00pm start
VENUE : DON MOORE COMMUNITY CENTRE
Cnr of North Rocks Rd & Farnell Avenue, North Rocks, NSW 2118
TICKET: 30$/family or 20$/ person

Basavaraj - 0406338200, Rajesh - 0466378744, Mallikarjun - 0425366286, Somashekar - 0450408141, Shivakumar - 0401057625

ಸಿಡ್ನಿ ಯುಗಾದಿ ಹಬ್ಬ

ಏಪ್ರಿಲ್ ೨೨, ೨೦೧೭, ಸಂಜೆ ೬ ಘಂಟೆಗೆ

Wattle Grove Public School, cressbrook Drive, NSW 2173

ಸಂಪರ್ಕಿಸಿ: Narayana - 0423634979, Deepak - 0413607311, Nagabhushan - 0433763911

sugamakannada@gmail.com

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.